ಸಂಪುಟ: 06 ಸಂಚಿಕೆ: 101 ಪುಟಗಳು: 08 ಬುಧವಾರ 24 ಜೂನ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ಅಪರಿಚಿತರ ಗೆಳೆತನ ಕಷ್ಟವಲ್ಲ, ಆದರೆ ಇರುವ ಗೆಳೆಯರು ಅಪರಿಚಿತರಾಗದಂತೆ ನೋಡಿಕೊಳ್ಳುವುದು ದೊಡ್ಡದು!

# ಉದಯ ವಾಹಿನಿ
UV
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


# ಸದನದಲ್ಲಿ ರೈತರ ಪರ ಡಿಕೆಶಿ ಸಮರ

**ಎಸ್ ಇ ಜೆಡ್ ಆಗಬೇಕಾದರೆ, ಹೊರಗಡೆಯಾಗಬೇಕು. ಬೆಂಗಳೂರು ಸುತ್ತಮುತ್ತ ಇರುವಂಥ ಜಮೀನು ರಿಯಲ್ ಎಸ್ಟೇಟ್ ವ್ಯಾಪಾರಕ್ಕಲ್ಲ. ರಸ್ತೆ ಅಥವಾ ಏನೋ ಒಂದು ಉತ್ತಮವಾದಂಥ ಕೆಲಸಕ್ಕಿದ್ದರೆ, ರೈತ ತಲೆಬಾಗುತ್ತಾನೆ. ಆದರೆ, ತನ್ನ ಜಮೀನನ್ನು ಬಲವಂತವಾಗಿ ತೆಗೆದುಕೊಳ್ಳುವುದು ಎಂದರೆ, ಈ ಪ್ರದೇಶವನ್ನು ಭೂಸ್ವಾಧೀನ ಮಾಡಿದಂಥ ಸಂದರ್ಭದಲ್ಲಿ, ಒಂದು ಹಳ್ಳಿಯನ್ನು ಘೋಷಣೆ ಮಾಡುವಂಥ ಸಂದರ್ಭದಲ್ಲಿ ಸಾತನೂರು ಹಳ್ಳಿಗಳು, ರಾಮನಗರವೋ, ಸೋಲೂರೋ, ಮತ್ತೊಂದೋ ಮಾಡುವಂಥ ಸಂದರ್ಭದಲ್ಲಿ ಮಾರನೇ ಬೆಳಿಗ್ಗೆಯೇ ನಮ್ಮ ಎಲ್ಲಾ ಸ್ನೇಹಿತರು, ಏಜೆಂಟರು ಅಲ್ಲಿಗೆ ಹೊರಟು ಬಿಡುತ್ತಾರೆ ಎಂದು ಡಿಕೆ ಶಿವಕುಮಾರ್ ಸದನದಲ್ಲಿ ಉಲ್ಲೇಖ ಮಾಡಿದ್ದರು.**




• ಉದಯವಾಹಿನಿ,ಬೆಂಗಳೂರು

ಬಿಡದಿ ಟೌನ್ ಶಿಪ್ ವಿಚಾರ ಇದೀಗ ಆಡಳಿತ – ವಿಪಕ್ಷಗಳ ನಡುವೆ ಭಾರೀ ಚರ್ಚೆಗೆ ಗ್ರಾಸವಾಗುತ್ತಿದೆ, ಬಿಡದಿ ಎಚ್ ಡಿ ಕುಮಾರಸ್ವಾಮಿ ಅವರ 'ಕನಸಿನ ಕೂಸು ಎಂದು ಸಿಎಂ ಡಿಕೆ ಶಿವಕುಮಾರ್ ಆರೋಪ ಮಾಡುತ್ತಿದ್ದಾರೆ. ಆದರೆ, ಬೆಂಗಳೂರಿನ ಸುತ್ತ ಮುತ್ತ ರಿಯಲ್ ಎಸ್ಟೇಟ್ ದಂಧೆಗಾಗಿ ಬಿಡದಿ ಟೌನ್‌ಶಿಪ್ ಮಾಡಲಾಗಿತ್ತಿದೆ ಎಂದು ಕುಮಾರಸ್ವಾಮಿ ಆರೋಪ ಮಾಡುತ್ತಿದ್ದಾರೆ. ಇದೀಗ ಪರಸ್ಪರ ಉಭಯ ನಾಯಕರು ಪಂಥಾಹ್ವಾನ ನೀಡಿದ್ದಾರೆ. ಇಷ್ಟೆಲ್ಲಾ ಬೆಳವಣಿಗೆ ನಡುವೆ ಟೌನ್‌ಶಿಪ್‌ಗಾಗಿ ರೈತರ ಭೂಮಿಯನ್ನು ವಶಕ್ಕೆ ಪಡೆದುಕೊಳ್ಳುವ ಬಗ್ಗೆ ಸಿಎಂ ಡಿಕೆ ಶಿವಕುಮಾರ್ ಅವರ ನಿಲುವು ಏನಾಗಿತ್ತು ಎಂಬ ಕುತೂಹಲವೂ ಇದೆ.



2007,ಜುಲೈ 31ರಂದು ವಿಧಾನಸಭೆಯಲ್ಲಿ ನಡೆದ ಚರ್ಚೆಯಲ್ಲಿ ಟೌನ್‌ಶಿಪ್‌ಗಾಗಿ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ವಿಚಾರವಾಗಿ ನಿಲುವಳಿ ಸೂಚನೆ ಅಡಿಯಲ್ಲಿ ನಡೆದ ಚರ್ಚೆಯಲ್ಲಿ ಆಡಳಿತ ಮತ್ತು ವಿಪಕ್ಷದ ನಾಯಕರು ಭಾಗಿಯಾಗಿ ಮಾತನಾಡಿದ್ದರು. ಕಾಂಗ್ರೆಸ್ ಶಾಸಕರಾಗಿದ್ದ ಡಿಕೆ ಶಿವಕುಮಾರ್ ಕೂಡಾ ರೈತರ ಭೂಮಿ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಬೆಂಗಳೂರು ಸುತ್ತಮುತ್ತಲಿನ ಜಮೀನು ರಿಯಲ್ ಎಸ್ಟೇಟ್‌ಗಲ್ಲ ಎಂದು ಅವರು ಸದನದಲ್ಲಿ ಗುಡುಗಿದ್ದರು. ಅಲ್ಲದೆ, ರೈತರ ಭೂಮಿ ವಿಚಾರವಾಗಿ ಭಾವನಾತ್ಮಕವಾಗಿ ಮಾತನಾಡಿದ್ದರು.

ಸದನದಲ್ಲಿ ಮಾತನಾಡುತ್ತಾ ಡಿಕೆ ಶಿವಕುಮಾರ್ ಅವರು ಬಿಜೆಪಿ-ಜೆಡಿಎಸ್ ಸಮ್ಮಿಶ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸುತ್ತಾರೆ.

ಈ ಸರ್ಕಾರ ಬಂದ ದಿನದಿಂದಲೂ ಪ್ರತಿ ಹಂತದಲ್ಲಿಯೂ ಕೂಡ ನಮ್ಮದು ರೈತರ ಸರ್ಕಾರ, ರೈತರ ಪರವಾಗಿ ನಿಂತುಕೊಳ್ಳುತ್ತೇವೆ, ರೈತರ ಒಂದು ಎಕರೆ ಭೂಮಿಯೂ ಹೋಗಲಿಕ್ಕೆ ಬಿಡುವುದಿಲ್ಲ ಎಂದು ಅನೇಕ ಸಂದರ್ಭಗಳಲ್ಲಿ ಮಾಡಿರುವ ವಾದಗಳನ್ನು ನಾವು ಕೇಳಿದ್ದೇವೆ. ಹಿಂದೆ ನಮ್ಮ ಸರ್ಕಾರವಿದ್ದಂಥ ಸಂದರ್ಭದಲ್ಲಿ, ಅರ್ಕಾವತಿ ಲೇಔಟ್ಟಾಗಿ ಮತ್ತು ಬೇರೆ ಬೇರೆ ಯೋಜನೆಗಳಲ್ಲಿ ಕೆಲವು ಇಂಡಸ್ಟ್ರಿಗಳಿಗೆ, ಮತ್ತೊಂದಕ್ಕೆ ಜಮೀನು ಬೇಕೆಂದು ನೋಟಿಫಿಕೇಷನ್ ಮಾಡುವಂಥ ಸಂದರ್ಭದಲ್ಲಿ, ಮೈಸೂರಿನಲ್ಲಿ ಜಮೀನನ್ನು ಕೊಟ್ಟಾಗ, ಬೆಂಗಳೂರಿನಲ್ಲಿ ಕೊಡಬೇಕು ಎಂದು ಪ್ರಯತ್ನ ಪಟ್ಟಾಗ ನಮ್ಮ ಮೇಲೆ ಬೇಕಾದಷ್ಟು ಟೀಕೆ ಟಿಪ್ಪಣಿಗಳು ಬಂದವು' ಎಂದು ಉಲ್ಲೇಖಿಸುತ್ತಾರೆ.

'ಇವರೇನಾ ಇರುವುದು, ಇವರನ್ನು ಮಾತ್ರ ನೀವು ದೊಡ್ಡವರನ್ನಾಗಿ ಮಾಡುತ್ತಿದ್ದೀರಿ ಎಂದು ಹೇಳಿ ಬೇಕಾದಷ್ಟು ವಾದ ವಿವಾದಗಳು ಮಾಡಿರುವುದನ್ನು ನೋಡಿದ್ದೇವೆ. ಅನೇಕ ವಿಚಾರಗಳಲ್ಲಿ ಪ್ರತಿಭಟನೆಗಳು ಆಗಿರತಕ್ಕಂಥಾದ್ದನ್ನು ಕೂಡ ತಾವೆಲ್ಲ ನೋಡಿದ್ದೀರಿ. ಇವುಗಳ ಮಧ್ಯದಲ್ಲಿ, ರೈತ ಪರವಾಗಿರತಕ್ಕಂತ ಸಂದರ್ಭದಲ್ಲಿ, ಈ ಸರ್ಕಾರ ಎಲ್ಲಾ ಸಂದರ್ಭದಲ್ಲೂ ರೈತರ ಪರವಾಗಿ ನಿಲ್ಲುತ್ತದೆ ಎಂದು ನಾವು ಚಿಂತನೆ ಮಾಡುವಾಗ, ಜನ ಇವರ ಮೇಲೆ ಅಷ್ಟು ಅಪೇಕ್ಷೆಯನ್ನಿಟ್ಟುಕೊಂಡಿರುವಂಥ ಸಂದರ್ಭದಲ್ಲಿ ಈ ರೀತಿ ರೈತರ ಜಮೀನನ್ನು ತೆಗೆದುಕೊಳ್ಳಲು ಹೊರಟಿದ್ದೀರಿ'.

ಬೆಂಗಳೂರು ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ 1,50,000 ಎಕರೆ ಅಥವಾ 1,60,000 ಎಕರೆ ಜಮೀನನ್ನು ನೀವು ಭೂಸ್ವಾಧೀನ ಮಾಡಿಬಿಟ್ಟಿದ್ದೀರಿ, ಹಂಚಿಬಿಟ್ಟಿದ್ದೀರಿ ಎಂದು ಹೇಳಲಿಕ್ಕೆ ನಾನು ತಯಾರಿಲ್ಲ. ಆದರೆ, ಈ ಸರ್ಕಾರದ ಚಿಂತನೆ ಆ ರೀತಿ ಇದೆ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾದ ಮೇಲೆ ಬರೀ ಟೌನ್ ಶಿಪ್‌ಗೋಸ್ಕರ ಹಳ್ಳಿಗಳನ್ನು ನಿಗದಿ ಮಾಡಿ, ಉಪನಗರ ನಿರ್ಮಾಣ ಕ್ಕೋಸ್ಕರ ಹೊಸಕೋಟೆಯಲ್ಲಿ, ರಾಮನಗರದಲ್ಲಿ,

## ಏಜೆಂಟರ ಅಟ್ಟಹಾಸದ ಬಗ್ಗೆಯೂ ಉಲ್ಲೇಖ

ಏಜೆಂಟರು ರೈತರ ಬಳಿ ಹೋಗಿ ದಂಧೆ ನಡೆಸುತ್ತಾರೆ. ಏಯ್, ನಿನ್ನದು ಆಗುತ್ತಿದೆ, ನೋಡಿಲ್ಲಿ, ಬರೆದುಬಿಟ್ಟಿದ್ದಾರೆ,ಬರೆದುಬಿಟ್ಟಿದ್ದಾರೆ. ನಿನಗೆ ಎಕರೆಗೆ 2,3,5, ಲಕ್ಷ ರೂ. ಕೊಡುತ್ತಾರೆ. ನೀನು ಕೊಟ್ಟುಬಿಡು ಎಂದು ತೆಗೆದುಕೊಂಡು ದೊಡ್ಡ ದಂಧೆ ನಡೆಯುತ್ತಿದೆ. ಇದರ ಬಗ್ಗೆ ದೊಡ್ಡ ತನಿಖೆಯಾಗಬೇಕು. ನಮ್ಮ ಅಧಿಕಾರಿಗಳು ಇದಕ್ಕೆ ಮನ್ನಣೆ ಕೊಡಬಾರದು. ನಮ್ಮ ರೈತನ ಭೂಮಿಯನ್ನು, ಸ್ವಾಭಿಮಾನವನ್ನು ಕಾಪಾಡಲಿಕ್ಕೆ ಈ ಸರ್ಕಾರ ಬದ್ಧವಾಗಬೇಕು.

ಏನು ಅವರು ಹಿಂದೆ ಘೋಷಣೆ ಮಾಡುತ್ತಿದ್ದರೋ, ಇದು ರೈತರ ಮಕ್ಕಳ ಸರ್ಕಾರ, ಒಂದು ಎಕರೆ ರೈತನ ಭೂಮಿಯನ್ನು ನಾವು ಕೊಡುವುದಿಲ್ಲ, ರೈತ ಹಾಳಾಗುವುದಕ್ಕೆ ಬಿಡುವುದಿಲ್ಲವೆಂದು ಏನು ಅವರು ಒಂದು ವಚನವನ್ನು ಈರಾಜ್ಯದ ಜನತೆಗೆ ಕೊಟ್ಟರೋ, ಆ ವಚನವನ್ನು ಅವರು ಪಾಲನೆ ಮಾಡಬೇಕು.

## ಭೂಸ್ವಾಧೀನಕ್ಕೆ ಮುಂದಾಗಿದ್ದಕ್ಕೆ ಚುನಾವಣೆಯಲ್ಲಿ ಹಿನ್ನಡೆ!

ನನ್ನ ಕ್ಷೇತ್ರದಲ್ಲಿ ಕಬ್ಬಾಳಮ್ಮ ದೇವಸ್ಥಾನ ಎನ್ನುವ ಒಂದು ದೇವಸ್ಥಾನವಿದೆ. ಜನರಿಗೆ ಅನುಕೂಲವಾಗಲಿ ಎಂದು ನಾಲ್ಕು ಎಕರೆಯನ್ನು ಭೂಸ್ವಾಧೀನ ಮಾಡಬೇಕು ಎಂದು ಪ್ರಯತ್ನ ಪಟ್ಟೆ. ಅದೇ ರೀತಿ ಕೋಡಂಬಳ್ಳಿಯಲ್ಲಿ ಊರನ್ನು ಅಗಲ ಮಾಡಬೇಕು ಎಂದು ಹೇಳಿ ರೋಡಿಗಾಗಿ ಅಗಲ ಮಾಡಬೇಕು ಎಂದು ಹೇಳಿ, ರಸ್ತೆಯಲ್ಲಿ ಇದ್ದಂಥವರನ್ನು ತೆರವು ಮಾಡಿ 10-12 ಅಡಿ ಅಗಲ ಮಾಡಬೇಕು ಎಂದು ಪ್ರಯತ್ನ ಪಟ್ಟೆ.ನಂತರ ಚುನಾವಣೆ ನಡೆಯಿತು.

ಆ ಊರಿನಲ್ಲಿ ಜನ ನನಗೆ ಓಟು ಹಾಕುತ್ತಿದ್ದರು. ಆದರೆ ಮುಂದಿನ ಚುನಾವಣೆಯಲ್ಲಿ ಢಮಾರ್ ಎಂದು ಹೋದೆ. ನನ್ನ ಅಭ್ಯರ್ಥಿಗೆ ನೂರು ಚಿಲ್ಲರೆ ಓಟುಗಳು, ಜೆ. ಡಿ. (ಎಸ್)ಗೆ ನಾಲ್ಕೂರು ಚಿಲ್ಲರೆ ಓಟುಗಳು ಬಂದವು. ಬರೀ ಭೂಸ್ವಾಧೀನ ಎಂದು ಪ್ರಾರಂಭಮಾಡಿದ್ದಕ್ಕೇ ಹೀಗಾಯಿತು. ಕೋಡಂಬಳ್ಳಿಯಲ್ಲೂ ಅದೇ ಪರಿಸ್ಥಿತಿಯಾಯಿತು.

ಎಲ್ಲಾ ಕಡೆಯಲ್ಲೂ ಗೆದ್ದಿದ್ದೇನೆ, ಆದರೆ ಆ ಪಂಚಾಯಿತಿಯಲ್ಲಿ ಢಮಾರ್ ಎಂದು ಹೊಯಿತು ಎಂದು ಡಿಕೆಶಿ ಹೇಳುತ್ತಾರೆ.

**1** ಬೆಂಗಳೂರು ಸುತ್ತಮುತ್ತ ಇರುವಂಥ ಜಮೀನು ರಿಯಲ್ ಎಸ್ಟೇಟ್ ವ್ಯಾಪಾರ ಮಾಡುವುದಕ್ಕಲ್ಲ

**2** ಭೂಸ್ವಾಧೀನಕ್ಕೆ ಮುಂದಾದಾಗ ನನ್ನ ಅಭ್ಯರ್ಥಿಗಳು ಚುನಾವಣೆಯಲ್ಲಿ ಸೋಲಬೇಕಾಗಿ ಬಂದಿತ್ತು

**3** ಮನುಷ್ಯನಿಗೂ ಭೂಮಿಗೂ ಅಪಾರವಾದ ಸಂಬಂಧವಿದೆ, ನಾವು ಬೇಡವೆಂದರೂ ಭೂಮಿ ನಮ್ಮನ್ನು ಬಿಡುವುದಿಲ್ಲ




## ಬಿಡದಿ ಬಡಿದಾಟ

ರಾಮನಗರದ ಕಸಬಾ, ಬಿಡದಿಯಲ್ಲಿ, ಸೋಲೂರಿನಲ್ಲಿ, ಸಾತನೂರಿನಲ್ಲಿ ಸುಮಾರು 6,961 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಟೌನ್‌ಶಿಪ್ ಮಾಡಬೇಕು ಎಂದು ತಾವು ಚಿಂತನೆಯನ್ನು ನಡೆಸಿದ್ದೀರಿ.

ಇದರಲ್ಲಿ ಸರ್ಕಾರದ ಭೂಮಿ 21 ಸಾವಿರ ಇದೆ, ಖಾಸಗಿ ಭೂಮಿ 39 ಸಾವಿರ ಎಕರೆ ಇದೆ.

## ನಾನು ತಂಡ ಕಟ್ಟಿಕೊಂಡಿಲ್ಲ



ಸಿಎಂ ಒಂದು ಪತ್ರ ಬರೆದ್ರು. ವಿಧಾನಸೌಧಕ್ಕೆ ಚರ್ಚೆಗೆ ಬನ್ನಿ ಅಂತ. ನಾನು ಒಂದು ಪತ್ರ ಬರೆದೆ. ವಿಧಾನಸೌಧದಲ್ಲಿ 3-4 ಜನ ಕುಳಿತು ಮಾತನಾಡೋದು ಅರ್ಥ ಇಲ್ಲ. ಅವರು ಪತ್ರದಲ್ಲಿ ಒಂದು ಪದ ಬಳಸಿದ್ದಾರೆ.

ನಿಮ್ಮ 5 ಜನರ ತಂಡ ಅಂತ. ನಾನು ತಂಡ ಕಟ್ಟಿಕೊಂಡಿಲ್ಲ. ತಂಡ ಬಹುಶಃ ಅವರಲ್ಲಿ ಇರಬಹುದು. ನನಗೆ ಯಾವುದೇ ತಂಡ ಇಲ್ಲ. ನನಗೆ ಇರುವುದು ಒಂದೇ ತಂಡ ರೈತರ ಪರವಾಗಿ ಇರುವುದು ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು. ವಿಧಾನಸೌಧದಲ್ಲಿ ಬಂದು ಚರ್ಚೆ ಮಾಡಿದ್ರೆ ಯಾವುದೇ ರೀತಿ ತಾರ್ಕಿಕ ಅಂತ್ಯ ಕಾಣಲ್ಲ. ರೈತರ ಸಮ್ಮುಖದಲ್ಲಿ ಚರ್ಚೆ ಆಗಬೇಕು. ಇಲ್ಲಿ ಸಾರ್ವಜನಿಕರ ಅವಶ್ಯಕತೆಯೂ ಇಲ್ಲ. ಯಾವ ರೈತರು ಜಮೀನು ಕಳೆದುಕೊಳ್ತಿದ್ದಾರೆ. ಯಾರು ಸಮಸ್ಯೆಗೆ ಒಳಗಾಗಿದ್ದಾರೆ. ಅವರ ಜೊತೆ ನೇರಾ ನೇರ ಚರ್ಚೆ ಮಾಡಿದ್ರೆ ಮುಗಿದು ಹೋಯ್ತು. ಇಲ್ಲಿ ಯಾರಿಂದ ಆಯ್ತು. ಏಕೆ ಆಯ್ತು. ಈಗ ಏಕೆ ಆಯ್ತು. ಇದು ಯಾವುದು ನನಗೆ ಇರೋ ಪ್ರಮುಖವಾದ ವಿಷಯ ಅಲ್ಲ. ರೈತರು ಅಲ್ಲಿ ಭೂಮಿ ಕೊಡಲು ಆಗಲ್ಲ.

## ಬಿಡದಿ ಟೌನ್‌ಶಿಪ್ ಹೆಸರಲ್ಲಿ ರೈತರನ್ನು ಒಕಲೆಬಿಸೋಲ:ಡಿಸಿಎಂ



ಬಿಡದಿ ಟೌನ್‌ಶಿಪ್ ಯೋಜನೆಯ ಮೂಲಕ ರಾಜ್ಯ ಸರ್ಕಾರವು ಆ ಭಾಗದ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುವುದಿಲ್ಲ. ರೈತರ ಅಹವಾಲು ಆಲಿಸಿ, ಸಮಾಧಾನ ಪಡಿಸುವ ಜೊತೆಗೆ ಸಂಧಾನದ ಮೂಲಕ ಯೋಜನೆ ಜಾರಿ ಮಾಡಲು ಸರ್ಕಾರ ಪ್ರಯತ್ನ ಮಾಡುತ್ತಿದೆ' ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾಜಿ ಸಚಿವ ಹೆಚ್.ಕೆ.ಪಾಟೀಲ್ ಅವರ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿದ ನಂತರ ಅವರು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು.ಕೆಲವು ರೈತರು ನಮ್ಮದು ಒಣ ಭೂಮಿ ಇದೆ. ಇದರಿಂದ ನಮಗೆ ಅನುಕೂಲ ಇಲ್ಲ, ಈ ಭೂಮಿಯನ್ನು ನಾವು ಕೊಡಲ ಸಿದ್ಧರಿದ್ದೇವೆ. ನಮಗೆ ಹೆಚ್ಚು ಹಣ ಕೊಡಿ ಎಂದು ಕೇಳುತ್ತಾರೆ. ಬೇಡಿಕೆ ನೋಡಿ ಸಮಾಧಾನಕರ ಪರಿಹಾರದ ಹಣ ನೀಡಿದರೆ ಅವರು ಬೇರೆ ಕಡೆ ಜಮೀನು ತೆಗೆದುಕೊಳ್ಳುತ್ತಾರೆ.

---

### ಕಾರಿನಲ್ಲೇ ತೆರಳುತ್ತಿರುವಾಗಲೇ ವಿಡಿಯೋ ಕಾನ್ಫರೆನ್ಸ್ ಮಾಡಿ ಅಧಿಕಾರಿಗಳಿಗೆ ಸಚಿವ ಕೃಷ್ಣ ಭೈರೇಗೌಡ ತರಾಟೆ

• ಉದಯವಾಹಿನಿ,ಬೆಂಗಳೂರು

ನಗರದ ರಸ್ತೆಗಳು 20-30 ವರ್ಷ ಬಾಳಿಕೆ ಬರಬೇಕು. ಇನ್ನಾದರೂ ಗುಣಮಟ್ಟದಿಂದ ಕೂಡಿದ ಕಾಮಗಾರಿ ನಡೆಸಿ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಭೈರೇಗೌಡ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ತಮ್ಮ ನಿವಾಸದಿಂದ ವಿಧಾನಸೌಧದ ಕಡೆಗೆ ಬರುವಾಗ ಮೊಬೈಲ್ ಮೂಲಕವೇ ಜಿಬಿಎ ಮುಖ್ಯ ಆಯುಕ್ತರು, ವಿಶೇಷ ಆಯುಕ್ತರು, ವಲಯ ಆಯುಕ್ತರು, ಮುಖ್ಯ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್‌ಳು ಸೇರಿದಂತೆ ಇತರೆ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಕಾರಿನಲ್ಲೇ ಸಭೆ ನಡೆಸಿದ ಕೃಷ್ಣ ಭೈರೇಗೌಡರು, ನಾನು ಸಾವಿರ ಬಾರಿ ನಿಮ ಬಳಿ ರಸ್ತೆ ನಿಯಮಗಳ ಬಗ್ಗೆ ಹೇಳಿದ್ದೇನೆ. ಆದರೆ ಅದರ ಬಗ್ಗೆ ನೀವು ಗಮನವೇ ಹರಿಸಿಲ್ಲ ಎಂದು ಛೇಡಿಸಿದರು. ರಸ್ತೆಗಳನ್ನು ನಿರ್ಮಿಸುವಾಗ ಲೇನ್‌ಗಳನ್ನು ಸರಿಯಾಗಿ ಬರೆಸಬೇಕು. ಇದರಿಂದ ವಾಹನ ಸವಾರರಿಗೂ ಅದು ಅರ್ಥವಾಗುತ್ತದೆ. ನೀವು ಕೇವಲ ಅಕ್ಕಪಕ್ಕದಲ್ಲಿ ಮಾತ್ರ ಬಿಳಿ-ಕಪ್ಪು ಬಣ್ಣ ಬಳಿಯುತ್ತೀರ. ಆದರೆ ಮಧ್ಯಭಾಗದಲ್ಲಿ ಲೇನ್‌ಗಳನ್ನು ಬರೆಯುವುದನ್ನು ಏಕೆ ಮಾಡುತ್ತಿಲ್ಲ ಎಂದು ಪ್ರಶ್ನಿಸಿದರು.

### ಆ.31ರೊಳಗೆ ಪಂಚ ಪಾಲಿಕೆಗಳಿಗೆ ಚುನಾವಣೆ : ಜುಲೈ 2ನೇ ವಾರದಲ್ಲಿ ಅಧಿಸೂಚನೆ ಸಾಧ್ಯತೆ

• ಉದಯವಾಹಿನಿ, ಬೆಂಗಳೂರು

ಅಂತೂ ಇಂತೂ ಸುಪ್ರೀಂ ಕೋರ್ಟ್ ಆದೇಶದಂತೆ ಆ.31 ರೊಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರಪಾಲಿಕೆಗಳಿಗೆ ಚುನಾವಣೆ ನಡೆಯುವುದು ಖಚಿತಪಟ್ಟಿದೆ.

ಆ.31ರೊಳಗೆ ಚುನಾವಣೆ ನಡೆಸುವ ಸಂಬಂಧ ಈಗಾಗಲೇ ಮೂರು ಸಭೆಗಳನ್ನು ನಡೆಸಿರುವ ರಾಜ್ಯ ಚುನಾವಣಾ ಆಯೋಗ ಜುಲೈ ಮೊದಲ ಅಥವಾ ಎರಡನೇ ವಾರದಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಿ, ಆಗಸ್ಟ್ ಮೂರನೇ ವಾರದಲ್ಲಿ ಮತದಾನ ನಡೆಸಲು ಸಿದ್ಧತೆ ಮಾಡಿಕೊಂಡಿದೆ. ಜುಲೈ 10ರೊಳಗೆ ಚುನಾವಣಾ ದಿನಾಂಕ ಪ್ರಕಟಗೊಳ್ಳುವ ಸಾಧ್ಯತೆ ಇದ್ದು, ವೇಳಾಪಟ್ಟಿ ಪ್ರಕಟವಾದ ತಕ್ಷಣವೇ ಬೆಂಗಳೂರು ನಗರದಲ್ಲಿ ಮಾದರಿ ನೀತಿ ಸಂಹಿತೆ ಜಾರಿಗೆ ಬರಲಿದೆ ಎಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

ಜಿಬಿಎ ವ್ಯಾಪ್ತಿಯ ಐದು ನಗರಪಾಲಿಕೆಗಳಿಗೆ ಚುನಾವಣೆ ನಡೆಸಲು ನೀಡಿದ್ದ ಜೂನ್ 30ರ ಗಡುವನ್ನು ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಹಾಗೂ ಸಿಬ್ಬಂದಿ ಕೊರತೆಯನ್ನು ಪರಿಗಣಿಸಿ ಸುಪ್ರೀಂ ಕೋರ್ಟ್ ಆಗಸ್ಟ್ 31ರವರೆಗೆ ವಿಸ್ತರಿಸಿತ್ತು. ಮಾತ್ರವಲ್ಲ ಮತ್ತೊಮೆ ಚುನಾವಣೆ ಮುಂದೂಡುವ ವಿಚಾರವನ್ನು ನಮ ಬಳಿಗೆ ತರಬಾರದು ಎಂದು ಬಿಸಿ ಮುಟ್ಟಿಸಿತ್ತು.ರಾಜ್ಯ ಸರ್ಕಾರ ಸೆಪ್ಟೆಂಬರ್ ಅಂತ್ಯದವರೆಗೆ ಕಾಲಾವಕಾಶ ಕೋರಿ ಮನವಿ ಸಲ್ಲಿಸಿದ್ದರೂ, ನ್ಯಾಯಾಲಯ ಅದನ್ನು ತಿರಸ್ಕರಿಸಿದೆ. ಸುಪ್ರೀಂ ಕೋರ್ಟ್ ಆದೇಶದ ನಂತರ ರಾಜ್ಯ ಚುನಾವಣಾ ಆಯೋಗ ಸದ್ದಿಲ್ಲದೆ ಚುನಾವಣಾ ಸಿದ್ಧತೆ ಆರಂಭಿಸಿದೆ.

### ಶೀಘ್ರದಲ್ಲೇ ಕಾಂಗ್ರೆಸ್ ಜಿಲ್ಲಾಧ್ಯಕ್ಷರ ನೇಮಕಾತಿ; ಬೇರೆ ರಾಜ್ಯದ ವೀಕ್ಷಕರಿಂದ ಆಯ್ಕೆ ಪ್ರಕ್ರಿಯೆ - ಬಿ.ಕೆ. ಹರಿಪ್ರಸಾದ್

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್ ಸಂಘಟನೆಗೆ ಹೊಸ ರೂಪ ನೀಡುವ ನಿಟ್ಟಿನಲ್ಲಿ ಶೀಘ್ರದಲ್ಲೇ ಜಿಲ್ಲಾಧ್ಯಕ್ಷರ ನೇಮಕಾತಿ ಪ್ರಕ್ರಿಯೆ ಆರಂಭವಾಗಲಿದ್ದು, ಈ ಬಾರಿ ಬೇರೆ ರಾಜ್ಯಗಳಿಂದ ಬರುವ ವೀಕ್ಷಣಾಕಾರರು ಜಿಲ್ಲೆಯಲ್ಲೇ ಒಂದು ವಾರ ಕಾರ್ಯಕರ್ತರು ಹಾಗೂ ಮುಖಂಡರ ಅಭಿಪ್ರಾಯ ಸಂಗ್ರಹಿಸಿ ಎಐಸಿಸಿಗೆ ಹೆಸರು ಶಿಫಾರಸು ಮಾಡುವ ಮೂಲಕ ಅಂತಿಮ ಆಯ್ಕೆ ನಡೆಯಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದರು. ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಕೆಪಿಸಿಸಿ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಶಾಸಕಾಂಗ ಪಕ್ಷದನಾಯಕರು ಜಿಲ್ಲಾಧ್ಯಕ್ಷರ ಹೆಸರನ್ನು ಎಐಸಿಸಿಗೆ ಶಿಫಾರಸು ಮಾಡುತ್ತಿದ್ದರು. ಆದರೆ, ಈಗ ಎಐಸಿಸಿಯ ಸಂಘಟನ್ ಸರ್ಜನ್ ಅಭಿಯಾನ್ ಅಡಿಯಲ್ಲಿ ಹೊಸ ವ್ಯವಸ್ಥೆ ಜಾರಿಗೆ ಬಂದಿದೆ. ಇದರಂತೆ ಬೇರೆ ರಾಜ್ಯದ ವೀಕ್ಷಕರು ಜಿಲ್ಲೆಗೆ ಆಗಮಿಸಿ ಕನಿಷ್ಠ ಏಳು ದಿನಗಳ ಕಾಲ ಬ್ಲಾಕ್ ಕಾಂಗ್ರೆಸ್‌ಸಮಿತಿಗಳ ಸಭೆ ನಡೆಸಿ, ಕಾರ್ಯಕರ್ತರು ಹಾಗೂ ಮುಖಂಡರ ಅಭಿಪ್ರಾಯ ಸಂಗ್ರಹಿಸಲಿದ್ದಾರೆ. ಬಳಿಕ ಕನಿಷ್ಠ ಇಬ್ಬರಿಂದ ಗರಿಷ್ಠ ಆರು ಅಭ್ಯರ್ಥಿಗಳ ಹೆಸರನ್ನು ಎಐಸಿಸಿಗೆ ಸಲ್ಲಿಸಲಿದ್ದು, ಅದರ ಆಧಾರದ ಮೇಲೆ ಜಿಲ್ಲಾಧ್ಯಕ್ಷರನ್ನು ನೇಮಕ ಮಾಡಲಾಗುತ್ತದೆ ಎಂದು ವಿವರಿಸಿದರು.

ಎಎಸ್‌ಐಆರ್ ಕುರಿತು ಚುನಾವಣಾ ಆಯೋಗದ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಲಾಗಿದೆ. ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟಿರುವ ನೈಜ ಮತದಾರರ ದಾಖಲಾತಿಗೆ ಮತ್ತೊಮ್ಮೆ ವಿಶೇಷ ಅಭಿಯಾನ ನಡೆಸುವಂತೆ ಒತ್ತಾಯಿಸಲಾಗಿದೆ.

### ಕರ್ನಾಟಕದ ಐವರು ಸಾಧಕರಿಗೆ ಪದ್ಮ ಪ್ರಶಸ್ತಿ ಪ್ರದಾನ ಮಾಡಿದ ರಾಷ್ಟ್ರಪತಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಐವರು ಸಾಧಕರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪದ್ಮ ಪ್ರಶಸ್ತಿ ಪ್ರದಾನ ಮಾಡಿದ್ದಾರೆ.

ಕೆಎಲ್‌ಇ ಸಂಸ್ಥೆಯ ಮೂಲಕ ಲಕ್ಷಾಂತರ ಗ್ರಾಮೀಣ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಶಿಕ್ಷಣ ಮತ್ತು ಆಸ್ಪತ್ರೆಗಳ ಮೂಲಕ ಬಡವರಿಗೆ ಅತ್ಯಾಧುನಿಕ ಉಚಿತ/ಕಡಿಮೆ ವೆಚ್ಚದ ವೈದ್ಯಕೀಯ ಸೇವೆ ನೀಡುತ್ತಿರುವ ಮಹಾದಾನಿ ಡಾ. ಪ್ರಭಾಕರ್ ಕೋರೆ. ದೂರದರ್ಶನ ಮತ್ತು ಆಕಾಶವಾಣಿಯನ್ನು ಸಂಪೂರ್ಣವಾಗಿ ನವೀಕರಿಸಿ, ಕೋವಿಡ್ ಸಮಯದಲ್ಲಿ 'ರಾಮಾಯಣ' ಪ್ರಸಾರದ ಮೂಲಕ ಜಾಗತಿಕ ದಾಖಲೆ ಬರೆದ ಹಾಗೂ ಕೋಟ್ಯಂತರ ವಿದ್ಯಾರ್ಥಿಗಳಿಗೆ ಉಚಿತ ಟಿವಿ ಶಿಕ್ಷಣ ತಲುಪಿಸಿದ ತಂತ್ರಜ್ಞ ಶಶಿ ಶೇಖರ್ ವೆಂಪತಿ.

## ಕೈಕೊಟ್ಟ ಮುಂಗಾರು : ಕೃಷಿ ಚಟುವಟಿಕೆಗಳು ಕುಂಟಿತ
# ರಾಜ್ಯದ ಹಲವು ಜಿಲ್ಲೆಗಳ ರೈತರು ಕಂಗಾಲು

• ಉದಯವಾಹಿನಿ, ಬೆಂಗಳೂರು

ಮುಂಗಾರು ಮಳೆ ಹಿನ್ನಡೆಯಿಂದ ರಾಜ್ಯದ ಹಲವು ಕಡೆ ಕೃಷಿ ಚಟುವಟಿಕೆಗಳು ಕುಂಟುತ್ತಾ ಸಾಗುತ್ತಿದ್ದು, ದಾವಣಗೆರೆ, ಕಲಬುರಗಿ, ಬೆಳಗಾವಿ, ಹಾವೇರಿ, ಚಿತ್ರದುರ್ಗ, ವಿಜಾಪುರ, ಬಾಗಲಕೋಟೆ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬಿತ್ತಿದ ಬೆಳೆಗಳು ಒಣಗಿ ರೈತರು ಕಂಗಾಲಾಗಿದ್ದಾರೆ.

ಮಧ್ಯ ಕರ್ನಾಟಕ ಮತ್ತು ಹಳೇ ಮೈಸೂರು ಭಾಗದಲ್ಲಿ ಅಲ್ಪಸ್ವಲ್ಪ ಮಳೆಯಾಗಿದ್ದರೂ, ಬಿತ್ತನೆ ಚಟುವಟಿಕೆಗೆ ಅನುಕೂಲಕರ ವಾತಾವರಣ ಇಲ್ಲ. ಕೆಲವೆಡೆ ರೈತರು ಅವಧಿ ಪೂರ್ವ ಮುಂಗಾರನ್ನು ನಂಬಿಕೊಂಡು ಮೆಕ್ಕೆಜೋಳದಂತಹ ಬೆಳೆಗಳನ್ನು ಬಿತ್ತಿದ್ದರೂ, ಸಮರ್ಪಕ ಮಳೆಯಾಗದೇ ನೀರಿಲ್ಲದೆ ಬೆಳೆಗಳು ಒಣಗಿ ರೈತರು ಕೈ ಸುಟ್ಟುಕೊಂಡಿದ್ದಾರೆ.

ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಮೆಕ್ಕೆಜೋಳದ ಬೆಳೆ ಒಣಗಿ ಹೋಗಿದೆ. ಜೊತೆಗೆ ಕೀಟ ಬಾಧೆ ಕೂಡ ರೈತರನ್ನು ಕಂಗಲಾಗುವಂತೆ ಮಾಡಿದೆ. ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲೂ ಬಿತ್ತಿದ ಮೆಕ್ಕೆಜೋಳ ಒಣಗಿ ಹೋಗಿದ್ದು ರೈತರು ಸಂಕಷ್ಟಕ್ಕೊಳಗಾಗಿದ್ದಾರೆ. ಆರಂಭದಲ್ಲೇ ಒಣಗಿದ ಬೆಳೆಗೆ ವಿಮಾ ಸೌಲಭ್ಯ ದೊರೆಯುವುದಿಲ್ಲ. ಬಿತ್ತನೆಗಾಗಿ ಉಳುಮೆ ಮಾಡಿ, ಇತರ ಕೃಷಿ ಚಟುವಟಿಕೆಗಳು, ಬಿತ್ತನೆ ಬೀಜ, ರಸಗೊಬ್ಬರಕ್ಕಾಗಿ ಹಣ ಖರ್ಚು ಮಾಡಲಾಗಿದೆ. ಈಗ ರೈತರು ಆರಂಭದಲ್ಲೇ ಕೈ ಸುಟ್ಟುಕೊಳ್ಳುವ ಪರಿಸ್ಥಿತಿ ಎದುರಾಗಿದೆ. 2026ನೇ ಸಾಲಿನಲ್ಲಿ ನೈರುತ್ಯ ಮುಂಗಾರು ಕ್ಷೀಣವಾಗಿದ್ದು, ಮಳೆನಾಡು, ಕರಾವಳಿ ಹೊರತು ಪಡಿಸಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯ ಕೊರತೆ ಕಂಡು ಬಂದಿದೆ.

ಬೃಹತ್ ಜಲಾಶಗಳಾದ ಕೆ.ಆರ್.ಎಸ್, ಕಬಿನಿ, ಹೇಮಾವತಿ ಸೇರಿದಂತೆ ಹಲವು ಅಣೆಕಟ್ಟೆಗಳು ನೀರಿನ ಸಂಗ್ರಹದಲ್ಲಿ ಸಾಮಾನ್ಯ ವರ್ಷಕ್ಕಿಂತಲೂ ಕಡಿಮೆ ಇದೆ. ರಾಗಿ, ಭತ್ತ, ದ್ವಿದಳ ಹಾಗೂ ಸಿರಿ ಧಾನ್ಯಗಳ ಬಿತ್ತನೆಯಲ್ಲಿ



ಹಿನ್ನಡೆಯಾಗಿದೆ.ಕರ್ನಾಟಕ ಗ್ರಾಮೀಣ ಆರ್ಥಿಕತೆ ಈ ವರ್ಷ ಸಂಕಷ್ಟಕ್ಕೊಳಗಾಗುವ ಮತ್ತು ಆಹಾರೋತ್ಪಾದನೆ ನಿರೀಕ್ಷೆಗಿಂತಲೂ ಕಡಿಮೆಯಾಗುವ ಸಾಧ್ಯತೆಗಳಿವೆ. ನೈರುತ್ಯ ಮುಂಗಾರಿನ ಕೊರತೆಯಿಂದ ಕೃಷಿ ಚಟುವಟಿಕೆಗಳನ್ನು ನಿರ್ವಹಿಸಲಾಗದೆ ಹಾಗೂ-ಹೀಗೂ ಬಿತ್ತಿದ ಬೆಳೆಗಳು ಒಣಗಿ ಹೋಗುತ್ತಿರುವುದರಿಂದ ರೈತರು ಚಿಂತಾಕ್ರಾಂತರಾಗಿದ್ದಾರೆ. ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಿಂದ ಕೃಷಿ ಚಟುವಟಿಕೆಗಳು ದುಬಾರಿಯಾಗಿವೆ. ಬಿತ್ತನೆ ಸಂದರ್ಭದಲ್ಲೇ ಬೆಲೆಗಳು ಒಣಗುತ್ತಿರುವುದರಿಂದ ವಿಮಾ ಸೌಲಭ್ಯಗಳು ದೊರೆಯುತ್ತಿಲ್ಲ, ನಷ್ಟಕ್ಕೊಳಗಾಗುತ್ತಿರುವ ರೈತರ ಅಳಲು ಅರಣ್ಯರೋಧನವಾಗುತ್ತಿದೆ. ರಾಜ್ಯ ಸಚಿವ ಸಂಪುಟದಲ್ಲಿ ಕೇವಲ 13 ಮಂದಿ ಮಾತ್ರ ಸಚಿವರಿದ್ದಾರೆ. 20 ಸ್ಥಾನಗಳು ಖಾಲಿ ಇವೆ. ಪೂರ್ಣ ಪ್ರಮಾಣದ ಸಂಪುಟ ವಿಸ್ತರಣೆಯಾಗಿಲ್ಲ, ಜಿಲ್ಲಾ ಉಸ್ತುವಾರಿ ಸಚಿವರುಗಳ ನೇಮಕವೂ ಆಗಿಲ್ಲ. ಹೀಗಾಗಿ ರೈತರ ಗೋಳು ಕೇಳುವವರಿಲ್ಲ ಎನ್ನುವಂತಾಗಿದೆ. ಕೃಷಿ ಖಾತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಳಿಯೇ ಇದೆ. ಈಗಾಗಲೇ ಒಮೆ ಉನ್ನತಾಧಿಕಾರಿಗಳ ಜೊತೆ ಚರ್ಚೆ ನಡೆಸಿರುವ ಮುಖ್ಯಮಂತ್ರಿಯವರು, ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲೆಯ ಮುಖ್ಯ ಪೊಲೀಸ್ ಅಧಿಕಾರಿಗಳ ಜೊತೆಯಲ್ಲೂ ಎರಡನೇ ಸುತ್ತಿನ ಸಭೆ ನಡೆಸಿದ್ದಾರೆ. ಜಿಲ್ಲೆಗಳಲ್ಲಿ ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳಿಗೆ ಕೊರತೆಯಾಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಿದ್ದಾರೆ. ಜೊತೆಗೆ ಮಳೆ ಕೊರತೆಯಿಂದಾಗಿ ನೀರಿನ ಅವಲಂಬನೆ ಹೆಚ್ಚಿರುವ ಬೆಳೆಗಳನ್ನು ಬೆಳೆಯದಂತೆಯೂ ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ.

### ರೈತರು-ನೇಕಾರರ ಪ್ರತಿಭಟನೆ ವೇಳೆ ಬಿಜೆಪಿ ಮುಖಂಡರು ನಡೆದುಕೊಂಡ ರೀತಿ ಅತ್ಯಂತ ಅಮಾನುಷ : ಉಮಾಶ್ರೀ ಖಂಡನೆ

• ಉದಯವಾಹಿನಿ, ಬೆಂಗಳೂರು



ಜಿಲ್ಲೆಯ ರಬಕವಿಬನಹಟ್ಟಿ ತಾಲ್ಲೂಕಿನ ಮಹಾಲಿಂಗಪುರ ಹೆಸ್ಕಾಂ ಕಚೇರಿ ಬಳಿ ವಿದ್ಯುತ್ ಖಾಸಗೀಕರಣ ವಿರೋಧಿಸಿ ರೈತರು ಮತ್ತು ನೇಕಾರರು ನಡೆಸುತ್ತಿದ್ದ ಪ್ರತಿಭಟನೆ ಸಂದರ್ಭದಲ್ಲಿ ಬಿಜೆಪಿ ಮುಖಂಡರು ನಡೆದುಕೊಂಡ ರೀತಿ ಅತ್ಯಂತ ಅಮಾನುಷ ಎಂದು ಮಾಜಿ ಸಚಿವೆ ಉಮಾಶ್ರೀ ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ನೇಕಾರ ಸಮುದಾಯದ ಹೋರಾಟಗಾರ ಶಿವಲಿಂಗ ಟರ್ಕಿ ಮೇಲೆ ನಡೆದ ಹಲ್ಲೆ ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ವಿದ್ಯುತ್ ಪ್ರಸಾರಕ್ಕೆ ಈಗಾಗಲೇ ನಮಲ್ಲಿ ಬೆಸ್ಕಾಂ, ಜೆಸ್ಕಾಂ, ಹೆಸ್ಕಾಂನಂತಹ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ವಿದ್ಯುತ್ ವಿತರಣೆ ಮಾಡಲು ಟಾಟಾ ಪವರ್ ಸೇರಿದಂತೆ ಯಾವುದೇ ಖಾಸಗಿ ಕಂಪನಿಗೆ ಅನುಮತಿ ನೀಡಬಾರದು ಎಂದು ಅವರು ಮನವಿ ಮಾಡಿದ್ದಾರೆ.

ಕೇಂದ್ರ ಸರ್ಕಾರವು ವಿದ್ಯುತ್ ತಿದ್ದುಪಡಿ ಮಸೂದೆಯನ್ವಯ, ಒಂದೇ ಪ್ರದೇಶದಲ್ಲಿ ಸರ್ಕಾರಿ ಮತ್ತು ಖಾಸಗಿ ಕಂಪನಿಗೆ ವಿದ್ಯುತ್ ವಿತರಣಾ ಪರವಾನಗಿ ಕೊಡುವ ಪ್ರಸ್ತಾವ ಇದೆ. ಅದರ ಭಾಗವಾಗಿ ಟಾಟಾ ಪವರ್ ಕಂಪನಿಯು ಕೆಇಆರ್‌ಸಿಗೆ ಅರ್ಜಿ ಹಾಕಿ, ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಸೆಸ್ಕಾಂ ವ್ಯಾಪ್ತಿಯ 19 ಜಿಲ್ಲೆಗಳಲ್ಲಿ ಪ್ಯಾರಲಲ್ ವಿತರಣೆಗಾಗಿ ಲೈಸನ್ಸ ಕೇಳಿದೆ.

ಇದನ್ನು ಅನುಮೋದಿಸುವುದು ಕೆಇಆರ್‌ಸಿ ಆದರೂ, ಮೂಲಭೂತವಾಗಿ ಕಾನೂನು ಚೌಕಟ್ಟು ಬಲ ನೀಡಿರುವುದು ಕೇಂದ್ರ ಸರ್ಕಾರ ಎಂದು ದೂರಿದ್ದಾರೆ. ನೇಕಾರರು, ಬಡವರು, ಜನಸಾಮಾನ್ಯರಿಗೆ ಮಾರಕವಾದ ವಿದ್ಯುತ್ ಖಾಸಗೀಕರಣ ಬೇಡ ಎಂದು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರ ದೂರವಾಣಿ ಸಂಪರ್ಕ ವ್ಯವಸ್ಥೆಯಲ್ಲಿ ಖಾಸಗೀಕರಣ ಅವಕಾಶ ನೀಡಿದ ಪರಿಣಾಮ ಬಿಎಸ್‌ಎನ್‌ಎಲ್‌ನಲ್ಲಿ ದುಡಿಯುವವರ ಸ್ಥಿತಿ ಏನಾಗಿದೆ ಎಂಬ ಉತ್ತಮ ಉದಾಹರಣೆ. ಸ್ಪರ್ಧಾತಕ ದರ ನಿಗದಿ, ಕೆಲವೊಂದು ಕೊಡುಗೆಗಳು, ಗ್ರಾಹಕರನ್ನು ಆಕರ್ಷಿಸುತ್ತ ಸಾಗಿದೆ. ಆದರೆ, ವಿದ್ಯುತ್ ವಲಯ ಹಾಗಲ್ಲ ಎಂದಿದ್ದಾರೆ.

ಕರ್ನಾಟಕದಲ್ಲಿ ರೈತರು, ನೇಕಾರರು, ಬಡ ಕುಟುಂಬಗಳು, ಜನಸಾಮಾನ್ಯರು, ಸಣ್ಣ ಕೈಗಾರಿಕೆಗಳು ಈ ಖಾಸಗೀಕರಣದಿಂದ ಬಡವರ ಉದ್ಯೋಗ, ಜೀವನ ನಿರ್ವಹಣೆಯ ಮೇಲೆ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದ್ದಾರೆ.

ಜನ ವಿರೋಧಿ ಕೇಂದ್ರದ ಮಸೂದೆ ವಿದ್ಯುತ್ ಖಾಸಗೀಕರಣದ ಪರಿಣಾಮ ಮುಂದೊಂದು ದಿನ ನಮಲ್ಲಿನ ವಿದ್ಯುತ್ ನಿಗಮಗಳು ಶಕ್ತಿಹೀನವಾಗಿ ಮುಚ್ಚುವ ಸ್ಥಿತಿ ಬರಬಹುದು. ಇಲ್ಲಿನ ದುಡಿಯುವ ವರ್ಗದ ಬದುಕು ದುಸ್ಥರವಾಗಲಿದೆ.

## ಬೆಂಗಳೂರು ರಸ್ತೆ ಗುಂಡಿ ದುರಸ್ತಿಗೆ ವ್ಯಯಿಸಿರುವ ಹಣದ ಬಗ್ಗೆ 30 ದಿನದೊಳಗೆ ಶ್ವೇತಪತ್ರ ಬಿಡುಗಡೆ ಮಾಡಬೇಕು: ಸಂಸದ ತೇಜಸ್ವಿ ಸೂರ್ಯ

• ಉದಯವಾಹಿನಿ, ಬೆಂಗಳೂರು

ರಸ್ತೆ ಗುಂಡಿ ದುರಸ್ತಿಗೆ ಮೂರು ವರ್ಷದಲ್ಲಿ ಎಷ್ಟು ಹಣ ವ್ಯಯಿಸಿದ್ದೀರಿ ಎಂಬುದರ ಬಗ್ಗೆ 30 ದಿನಗಳ ಒಳಗೆ ಶ್ವೇತಪತ್ರ ಬಿಡುಗಡೆ ಮಾಡಬೇಕು ಎಂದು ಸಚಿವರಿಗೆ ಆಗ್ರಹಿಸಿದ್ದೇನೆ ಎಂದು ತೇಜಸ್ವಿ ಸೂರ್ಯ ತಿಳಿಸಿದರು. ಬಿಜೆಪಿ ಕಚೇರಿಯಲ್ಲಿ ಇಂದು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಇದು ನಮ್ಮ ಹಣ. ತೆರಿಗೆದಾರರ ಹಣ. ತೆರಿಗೆ ಕಟ್ಟದಿದ್ದರೆ ದಂಡ ಹಾಕ್ತಾರೆ. ಹಾಗಾದರೆ ನಮ್ಮ ರಸ್ತೆಗೆ ಜವಾಬ್ದಾರಿ ಯಾರು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಾವಿರಾರು ಕೋಟಿಯನ್ನು ಗುಂಡಿ ಮುಚ್ಚಲು ವ್ಯಯಿಸಿರುವುದಾಗಿ ಹೇಳಿದೆ. ಆದರೂ ಗುಂಡಿಗಳು ಮಾತ್ರ ಹಾಗೇ ಇವೆ. ಎನ್‌ಸಿಆರ್ ಟಿ ಮಾಹಿತಿ ಪ್ರಕಾರ ಗುಂಡಿಗೆ ಬಿದ್ದು ಸಾಯುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಹಾಗಾದರೆ ಹಣ ಎಲ್ಲಿ ಹೋಗಿದೆ. ಈಗ ಸಿಎಂ ಆಗಿರೋರೇ, ಹಿಂದೆ ಬೆಂಗಳೂರು ಇನ್‌ಚಾರ್ಜ್ ಇದ್ದರು. ಕಾಂಗ್ರೆಸ್ ನವರು ಮೂರು ವರ್ಷ ದುರಾಡಳಿತ ನೀಡಿದ್ದು, ಬೆಂಗಳೂರಿನಲ್ಲಿ ಜನ ಬೈತಿದ್ದಾರೆ. ಹೊಸ ಸರ್ಕಾರ ಬಂದಿದೆ ಅನ್ನೋ ತರ ಮಾತಾಡ್ತಿದ್ದಾರೆ. ಕೃಷ್ಣ ಬೈರೇಗೌಡ ಅವರು ಈಗ ಮಿನಿಸ್ಟರ್ ಆಗಿರಬಹುದು. ಆದ್ರೆ ಕಳೆದ ಮೂರು ವರ್ಷಗಳ ಕಾಲ ನಿಮ್ಮ ಸಚಿವರೇ ಮಿನಿಸ್ಟರ್ ಆಗಿದ್ರು. ಹಳೇದು ಲೆಕ್ಕ ಬಿಡಿ, ಹೊಸ ಅಕೌಂಟ್ ಓಪನ್ ಮಾಡಿ ಅಂದ್ರೆ ಆಗಲ್ಲ. ಹೊಸ ಅಕೌಂಟ್ ಓಪನ್ ಮಾಡ್ತೇನೆ ಅನ್ನೋದಾದ್ರೆ, ಹಳೇ ಮೂರು ವರ್ಷದ್ದು ವೈಟ್ ಪೇಪರ್ ಕೊಡಿ ಎಂದು ಆಗ್ರಹಿಸಿದರು.

ಸದ್ಯ ಸಿಎಂ ಆಗಿರುವ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರು ನಗರಾಭಿವೃದ್ಧಿ




ಸಚಿವರಾಗಿದ್ದರು. ಆಗ ಅವರು ಬೇರೆ ಬೇರೆ ಅವಧಿಯಲ್ಲಿ ನೀಡಿದ ಹೇಳಿಕೆಗಳು ಇವೆ.

2023 ರ ಡಿಸೆಂಬರ್‌ನಲ್ಲಿ ರೂ. 7 ಕೋಟಿ ಬಿಬಿಎಂಪಿಯಲ್ಲಿ ಗುಂಡಿ ಮುಚ್ಚಲು ವ್ಯಯಿಸಿದ್ದೇವೆ ಎಂದು ಹೇಳಿದ್ದರು. ಆದರೆ ಡಿಸೆಂಬರ್ 2024 ರಲ್ಲಿ ಶೇ.63 ರಷ್ಟು ಗುಂಡಿ ಜಾಸ್ತಿ ಆಗಿವೆ ಎಂದು ವಿಧಾನ ಪರಿಷತ್‌ನಲ್ಲಿ ತಿಳಿಸಿದ್ದರು. ಆಗಸ್ಟ್ 2025 ರಲ್ಲಿ ಬಿಬಿಎಂಪಿ 12 ಕೋಟಿಯನ್ನು ರಸ್ತೆ ಗುಂಡಿ ಮುಚ್ಚಲು ವೆಚ್ಚ ಮಾಡಿದೆ. ಆದರೆ ಶೇ.63 ರಷ್ಟು ಗುಂಡಿ ಜಾಸ್ತಿ ಆಗಿವೆ ಎಂದು ಹೇಳಿದ್ದಾರೆ. 2025 ರ ಸೆಪ್ಟಂಬರ್‌ನಲ್ಲಿ 750 ಕೋಟಿಯನ್ನು ರಸ್ತೆ ಗುಂಡಿ ಮುಚ್ಚಲು ಘೋಷಣೆ ಮಾಡಿದ್ದರು. ಮತ್ತೆ 1100 ಕೋಟಿ ರೂಪಾಯಿ ಅನುದಾನ ಗುಂಡಿ ಮುಚ್ಚಲು ಘೋಷಣೆ ಮಾಡಿದರು. ಹಾಗಾದರೆ ಯಾವ ಹಣ ಎಲ್ಲಿ ಹೋಗುತ್ತಿದೆ ಎಂದು ಸಂಸದ ತೇಜಸ್ವಿ ಸೂರ್ಯ ಪ್ರಶ್ನಿಸಿದರು. ಜಿಬಿಎ ರಚನೆ ಆದ ಮೇಲೂ 2200 ಕೋಟಿ ಹಣ ನೀಡಿದ್ದೇವೆ ಎಂದು ಹೇಳಿದ್ದರು. ಮತ್ತೆ ವೈಟ್ ಟಾಪಿಂಗ್‌ಗೆ ಹಣ ನೀಡಿದ್ದೇವೆ ಎಂದರು. ಐದೂವರೆ ಸಾವಿರ ಕೋಟಿ ರೂಪಾಯಿ ವ್ಯಯಿಸಿ ರಸ್ತೆ ಮಾಡಿದ ಮೇಲೆ ಡಿಸಿಎಂ, ಸಿಎಂ ಆದರು. ಅವರ ಸಂಪುಟದಲ್ಲಿ ಹೊಸ ನಗರಾಭಿವೃದ್ಧಿ ಸಚಿವರು ಎರಡು ಸಾವಿರ ಕೋಟಿ ರೂಪಾಯಿಯನ್ನು ರಸ್ತೆ ಗುಂಡಿಗೆ ಕೊಟ್ಟರು. ಒಂದೇ ವರ್ಷದಲ್ಲಿ ಇಷ್ಟೊಂದು ಸಾವಿರಾರು ಕೋಟಿ ಹಣ ಘೋಷಣೆ ಮಾಡಿದ್ದಾರೆ. ಹಣ ಬಿಡುಗಡೆ ಸಹ ಮಾಡ್ತಿದ್ದೇವೆ ಎನ್ನುತ್ತಾರೆ. ಆದ್ರೆ ಗುಂಡಿ ಮುಚ್ಚುತ್ತಿಲ್ಲ ಎಂದು ದೂರಿದರು.ಸಚಿವ ಕೃಷ್ಣ ಬೈರೇಗೌಡ ಅವರನ್ನು ಭೇಟಿ ಮಾಡಿ ನಗರದ ಅಭಿವೃದ್ಧಿ ಮತ್ತು ನಾಗರಿಕರಿಗೆ ಅನುಕೂಲವಾಗುವ 15 ಅಂಶಗಳ ಬಗ್ಗೆ ವಿಸ್ತಾರವಾಗಿ ಚರ್ಚೆ ನಡೆಸಿದ್ದೇನೆ. ನಗರದ ಜನರ ಜೀವನ ಮಟ್ಟ ಸುಧಾರಿಸುವ ಕ್ರಮಗಳಿಗೆ ಶೇ. ನೂರರಷ್ಟು ಬೆಂಬಲವನ್ನು ಕೇಂದ್ರ ಸರ್ಕಾರದ ಮಟ್ಟದಲ್ಲಿ ನೀಡಲಾಗುವುದು.

ಸಚಿವರಿಗೆ ಅಭಿವೃದ್ಧಿ ಸಂಬಂಧ ವಿವರವನ್ನು ಅಂಕಿ – ಅಂಶಗಳ ಸಮೇತ ನೀಡಿದ್ದೇನೆ. ರಾಜ್ಯ ಸರ್ಕಾರದ 30ಕ್ಕೂ ಹೆಚ್ಚು ಯೋಜನೆಗಳು ಬಾಕಿ ಇವೆ. ಹೊಸ ಯೋಜನೆ ಜಾರಿ ಮಾಡುವ ಮೊದಲು ಹಳೆಯ ಯೋಜನೆಗಳನ್ನು ಶೀಘ್ರ ಮುಗಿಸಬೇಕು ಎಂದು ತಿಳಿಸಿರುವುದಾಗಿ ಅವರು ಹೇಳಿದರು. ಬಿಎಂಆರ್ ಸಿಲ್, ಬಿಡಿಎ, ಬಿಎಂಎಲ್‌ಟಿಎ, ಕೆಆರ್ ಐಡಿಎಲ್ ಸೇರಿ 12ಕ್ಕೂ ಹೆಚ್ಚು ಮೂಲಸೌಕರ್ಯ ಏಜೆನ್ಸಿಗಳು ಬೆಂಗಳೂರಿನಲ್ಲಿವೆ.

ಇವುಗಳ ನಡುವೆ ಅಂತರ ಸಮನ್ವಯ ಏಜೆನ್ಸಿ ಇಲ್ಲ. ಆದ್ದರಿಂದ ಬಿಎಂಎಲ್‌ಟಿಎಗೆ ಅಧ್ಯಕ್ಷರ ನೇಮಕ ಮಾಡಿ ನೋಡಲ್ ಏಜೆನ್ಸಿ ಮಾಡಬೇಕು. ಮೆಟ್ರೋ ವಿಸ್ತರಣೆ, ರಸ್ತೆ ಗುಂಡಿಗಳನ್ನು ಮುಚ್ಚುವುದು, ಪಾದಚಾರಿ ಮಾರ್ಗದ ಬಗ್ಗೆ ಸಚಿವರೊಂದಿಗೆ ಚರ್ಚಿಸಿರುವುದಾಗಿ ಸಂಸದರು ಹೇಳಿದರು.

### ಕೇಂದ್ರಕ್ಕೆ ಪ್ರಸ್ತಾವನೆ ಬಂದಿಲ್ಲ

**ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದ ಅರ್ಬನ್ ಚಾಲೆಂಜ್ ಫಂಡ್ (ಯುಸಿಎಫ್) ಅಡಿ 1 ಲಕ್ಷ ಕೋಟಿ ಇಡಲಾಗಿದೆ. ರಾಜ್ಯ ಸರ್ಕಾರದಿಂದ ಈ ಯೋಜನೆಯಡಿ ಅನುದಾನಕ್ಕಾಗಿ ಪ್ರಸ್ತಾವನೆ ಬಂದಿಲ್ಲ. ಸರಿಯಾದ ಡಿಪಿಆರ್ ಕೊಟ್ಟರೆ ಕೇಂದ್ರ ಹಣ ನೀಡುತ್ತದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಎರಡು ವರ್ಷದ ಹಿಂದೆ ಮಹಾನಗರದಲ್ಲಿ ಬಾಡಿಗೆ ಮನೆಯಲ್ಲಿ ಇರುವವರಿಗೆ ಸಹಾಯವಾಗಲು ಯೋಜನೆ ರೂಪಿಸಲಾಗಿದೆ. ಈ ಸರ್ಕಾರ ಬಂದ ಮೇಲೆ ಈ ಯೋಜನೆಯಡಿ ಒಂದೇ ಒಂದು ಬಾಡಿಗೆ ಮನೆ ಕಟ್ಟಿಲ್ಲ. ಅರ್ಜಿ ಸಹ ಬಂದಿಲ್ಲ. ಈ ಬಗ್ಗೆ ಗಮನ ಹರಿಸಲು ಸಚಿವರನ್ನು ಕೋರಿರುವುದಾಗಿ ಅವರು ಹೇಳಿದರು.ಇದಲ್ಲದೇ ಕುಡಿಯುವ ನೀರಿನ ಸಮಸ್ಯೆ, ಕೆರೆ ಉಳಿಸುವುದು, ಅಂತರ್ಜಲ ಕಾಪಾಡುವ ಬಗ್ಗೆಯೂ ಚರ್ಚೆ ನಡೆಸಿದ್ದಾಗಿ ತಿಳಿಸಿದರು.**

**ಈ ದಿನದ ದರ** ಪೆಟ್ರೋಲ್: 110.93 ₹/L | ಡೀಸೆಲ್ : 98.80₹/L | ಬಂಗಾರ: ₹ 14, 460/Gram 24ct ₹13,255/Gram 22ct | ಬೆಳ್ಳಿ: ₹245.00/Gram

# ಸಂವಿಧಾನ ಬಗ್ಗೆ ನಮಗೆ ಮೋದಿ ಅವರಿಂದ ಕಲಿಯಬೇಕಾದ್ದು ಏನೂ ಇಲ್ಲ : ಪ್ರಿಯಾಂಕ್ ಖರ್ಗೆ

## ವೇದಗಳನ್ನು ಮುಗಿಸಿ 'ಸಂವಿಧಾನ' ಎಂಬುದನ್ನು ತರುತ್ತಿದ್ದಾರೆ, ನಾವು ಅದನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತೇವೆ.

• ಉದಯವಾಹಿನಿ, ಬೆಂಗಳೂರು

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಇಂದು ಮಂಗಳವಾರ ಕೇಂದ್ರ, ಸರ್ಕಾರ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ ವಿರುದ್ಧ ವಾಗ್ದಾಳಿ ಮುಂದುವರಿಸಿದರು. ಸಂವಿಧಾನದ ಬಗ್ಗೆ ಕಾಂಗ್ರೆಸ್‌ಗೆ ಪ್ರಧಾನಿ ನರೇಂದ್ರ ಮೋದಿಯವರಿಂದ ಕಲಿಯಬೇಕಾದದ್ದೇನೂ ಇಲ್ಲ ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ, 1950ರಲ್ಲಿ ಭಾರತೀಯ ಸಂವಿಧಾನ ಅಂಗೀಕರಿಸಲ್ಪಟ್ಟಾಗ ಆರ್‌ಎಸ್‌ಎಸ್ ಅದನ್ನು ವಿರೋಧಿಸಿತ್ತು ಎಂದು ಆರೋಪಿಸಿದರು. ಸಂವಿಧಾನದ ಬಗ್ಗೆ ನಮಗೆ ಮೋದಿ ಅವರಿಂದ ಕಲಿಯಬೇಕಾದ ಅಗತ್ಯವಿಲ್ಲ. ಅವರು ಸಂವಿಧಾನವನ್ನು ನಿರ್ಲಕ್ಷಿಸಿದ್ದ ಚಿಂತನಾ ಪರಂಪರೆಯಿಂದ ಬಂದವರು. ಆರ್‌ಎಸ್‌ಎಸ್ ತಮ್ಮ ಸಂಪಾದಕೀಯದಲ್ಲಿ ಸ್ಪಷ್ಟವಾಗಿ ಸಂವಿಧಾನವನ್ನು ತಿರಸ್ಕರಿಸುತ್ತೇವೆ ಎಂದು ಬರೆದಿತ್ತು.

ದೆಹಲಿಯ ರಾಮಲೀಲಾ ಮೈದಾನದಲ್ಲಿ 150ಕ್ಕೂ ಹೆಚ್ಚು ಪ್ರತಿಭಟನೆಗಳನ್ನು ನಡೆಸಿ, ಮಹರ್ಷಿ ನೆಹರು ಮತ್ತು ಋಷಿ ಅಂಬೇಡ್ಕರ್ ವೇದಗಳನ್ನು ಮುಗಿಸಿ 'ಸಂವಿಧಾನ' ಎಂಬುದನ್ನು


ಉದಯವಾಹಿನಿ ಚಿತ್ರ

ತರುತ್ತಿದ್ದಾರೆ, ನಾವು ಅದನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತೇವೆ. ದೇಶದ ಸಂವಿಧಾನವಾಗಿ ಮನುಸ್ಮೃತಿಯೇ ಬೇಕು ಎಂದು ಹೇಳಿದ್ದರು. ಅಂತಹ ಹಿನ್ನೆಲೆಯವರಿಂದ ನಮಗೆ ಸಂವಿಧಾನದ ಪಾಠ ಬೇಕೇ ಸಂಸತ್ತು ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ನೀವು ನೋಡುತ್ತಿಲ್ಲವೇ ಎಂದು ಕೇಳಿದರು.

ಖರ್ಗೆ ಅವರ ಈ ಹೇಳಿಕೆ, ಸಂವಿಧಾನ ಮತ್ತು ನಕ್ಸಲ್ ವಾದ ವಿಷಯದಲ್ಲಿ ಪ್ರಧಾನಿ ಮೋದಿ ಕಾಂಗ್ರೆಸ್‌ವಿರುದ್ಧ ಟೀಕೆ ಮಾಡಿದ ಬೆನ್ನಲ್ಲೇ ಬಂದಿದೆ. ಮಾತನಾಡಿದ್ದ ಪ್ರಧಾನಿ ಮೋದಿ, ನಕ್ಸಲರ ಹಿಂಸಾಚಾರದ ಬಗ್ಗೆ ಕಾಂಗ್ರೆಸ್ ನಿರ್ಲಕ್ಷ್ಯ ತೋರಿದೆ ಎಂದು ಆರೋಪಿಸಿದ್ದರು.

> ಸಂವಿಧಾನದ ಕುರಿತ ಟೀಕೆಗಳ ಜೊತೆಗೆ, ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ವಿರುದ್ಧದ ತಮ್ಮ ಟೀಕೆಯನ್ನು ಮುಂದುವರಿಸಿ, ಸಂಘವು ಅಧಿಕೃತವಾಗಿ ನೋಂದಣಿ ಮಾಡಿಕೊಂಡು ತನ್ನ ದಾಖಲೆಗಳನ್ನು ಸಾರ್ವಜನಿಕವಾಗಿ ಮಂಡಿಸಬೇಕು ಎಂದು ಆಗ್ರಹಿಸಿದರು. -ಪ್ರಿಯಾಂಕ್ ಖರ್ಗೆ

## 14 ಲಕ್ಷ ಅನರ್ಹರ ಬಿಪಿಎಲ್ ಕಾರ್ಡ್ ರದ್ದಾಗುತ್ತಾ?: ಸಚಿವ ಕೆ.ಎಚ್. ಮುನಿಯಪ್ಪ

• ಉದಯವಾಹಿನಿ,ಬೆಂಗಳೂರು

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಪೈಕಿ ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳ ಮರುಪರಿಷ್ಕರಣೆಯ ಬೆನ್ನಲ್ಲೇ, ಈಗ 'ಅನ್ನಭಾಗ್ಯ' ಯೋಜನೆಗೂ ಕತ್ತರಿ ಬೀಳುವ ಸಾಧ್ಯತೆ ಹೆಚ್ಚಿದೆ ಎನ್ನಲಾಗುತ್ತಿದೆ. ರಾಜ್ಯದ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಈ ಕುರಿತು ಸುಳಿವನ್ನು ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕೆ.ಎಚ್. ಮುನಿಯಪ್ಪ, 'ಅನ್ನಭಾಗ್ಯ ಯೋಜನೆಯನ್ನು ನಿಜವಾದ ಬಡವರಿಗೆ ತಲುಪಿಸುವುದು ನಮ್ಮ ಗುರಿ ಎಂದು ಹೇಳಿದ್ದಾರೆ. ಪ್ರಸ್ತುತ ಸುಮಾರು 13 ರಿಂದ 14 ಲಕ್ಷ ಜನರು ಅನರ್ಹರಾಗಿದ್ದರೂ ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿದ್ದಾರೆ. ಅಂತಹ ಅನರ್ಹರನ್ನು ಪತ್ತೆ ಹಚ್ಚಿ ಅವರನ್ನು ಪಟ್ಟಿಯಿಂದ ಕೈಬಿಡುವ ಕೆಲಸವನ್ನು ನಾವು ಶೀಘ್ರದಲ್ಲೇ ಮಾಡಲಿದ್ದೇವೆ' ಎಂದು ಅವರು ತಿಳಿಸಿದರು. ಸ್ವಯಂಪ್ರೇರಿತರಾಗಿ ತಮ್ಮ ಕಾರ್ಡ್‌ಗಳನ್ನು ಎಪಿಎಲ್‌ಗೆ ವರ್ಗಾಯಿಸಿಕೊಳ್ಳಬೇಕು ಎಂದು ಈ ಹಿಂದೆಯೇ ಮನವಿ ಮಾಡಲಾಗಿತ್ತು.

## ಉದ್ಘಾಟನೆಗೂ ಮುನ್ನವೇ ಕಡಬಗೆರೆ-ಮೈಸೂರು ರೋಡ್ ಆರ್ಟೀರಿಯಲ್ ರಸ್ತೆಗೆ ಹಾನಿ!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಜೂನ್ 27 ರಂದು ಉದ್ಘಾಟನೆಗೆ ಕಾಯುತ್ತಿರುವ ಒಂದು ಪ್ರಮುಖ ರಸ್ತೆಯು ಉದ್ಘಾಟನೆಗೂ ಮುನ್ನವೇ ಹಾನಿಗೊಂಡಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತನ್ನ ರಚನೆಯ 50 ವರ್ಷಗಳನ್ನು ಪೂರೈಸಿದ್ದು, ಜೂನ್ 27 ರಂದು ಮಾಗಡಿ ರಸ್ತೆಯ ಕಡಬಗೆರೆ ಕ್ರಾಸ್ ಮತ್ತು ಮೈಸೂರು ರಸ್ತೆಯನ್ನು ಸಂಪರ್ಕಿಸುವ 10.7 ಕಿಮೀ ಮೇಜರ್ ಆರ್ಟೀರಿಯಲ್ ರಸ್ತೆಯನ್ನು ಉದ್ಘಾಟಿಸಲು ಸಜ್ಜಾಗುತ್ತಿದೆ. ಜೊತೆಗೆ 15 ಲಕ್ಷ ಸಸಿಗಳನ್ನು ನೆಡಲು ಸಹ ಸಿದ್ಧವಾಗುತ್ತಿದೆ.

ಕಡಬಗೆರೆ ಬಳಿ ಸುಮಾರು 20 ಮೀಟರ್ ಪ್ಯಾಚ್ ಕಂಡುಬಂದಿದೆ. ಜಲ್ಲಿಕಲ್ಲು ಸಡಿಲವಾಗಿರುವುದು ಕಂಡುಬಂದಿದ್ದು, ಪ್ಯಾಚ್ ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ವರದಿಯಾಗಿದೆ. ಅಧಿಕಾರಿಗಳು ಪ್ಯಾಚ್ ಅನ್ನು ಸರಿಪಡಿಸಲು ಅಗ್ರಿಗೇಟರ್‌ಗಳನ್ನು ಮಿಶ್ರಣ ಮಾಡುತ್ತಿರುವುದು ಕಂಡುಬಂದಿದೆ. ಈ ಸುದ್ದಿ ಶೀಘ್ರದಲ್ಲೇ ಹರಡಿ, ಉದ್ಘಾಟನೆಯಾಗದ ರಸ್ತೆಯ ಗುಣಮಟ್ಟಕ್ಕಾಗಿ ಬಿಡಿಎಯನ್ನು ಟ್ರೋಲ್ ಮಾಡಲಾಯಿತು.

ಭಾರೀ ಮಳೆ ಮತ್ತು ನೀರಿನ ಹರಿವಿನಿಂದ ಹಾನಿಗೆ ಕಾರಣವಾಗಿದೆ ಎಂದು ಹೇಳಲಾಗಿದೆ. ತುಮಕೂರು, ಕುಣಿಗಲ್ ನಿಂದ ಮೈಸೂರು ರಸ್ತೆ ಕಡೆಗೆ ಹೋಗುವ ವಾಹನ ಬಳಕೆದಾರರು ಸಹ ಈ ಮಾರ್ಗವನ್ನು ಆಯ್ಕೆ ಮಾಡಬಹುದಾಗಿದೆ. ಇದು ಬೆಂಗಳೂರಿನ ಹೊರವಲಯದಲ್ಲಿ, ವಿಶೇಷವಾಗಿ ಉತ್ತರ ಬೆಂಗಳೂರಿನ ಬಳಿ ಸಂಚಾರದ ಹೊರೆಯನ್ನು ಕಡಿಮೆ ಮಾಡುತ್ತದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಲು ಬಿಡಿಎ ಅಧಿಕಾರಿಗಳು ಮತ್ತು ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಲಭ್ಯವಿರಲಿಲ್ಲ.

## ವಿದ್ಯಾರ್ಥಿಗಳು ನೀಟ್ ಪರೀಕ್ಷೆ ತಪ್ಪಿಸಿಕೊಂಡಿದ್ದಕ್ಕೆ ಹರಿಪ್ರಸಾದ್ ವಿಷಾದ: ತಪ್ಪು ಮಾಹಿತಿ ಹರಡದಂತೆ ಬಿಜೆಪಿಗೆ ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು

ಕೆಲವು ವಿದ್ಯಾರ್ಥಿಗಳು ನೀಟ್ ಪರೀಕ್ಷೆ ಬರೆಯಲು ಸಾಧ್ಯವಾಗಿಲ್ಲ ಎಂಬ ವರದಿಗಳ ಬಗ್ಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್‌ಸಮಿತಿ (ಕೆಪಿಸಿಸಿ) ಅಧ್ಯಕ್ಷ ಬಿ ಕೆ ಹರಿಪ್ರಸಾದ್ ವಿಷಾದ ವ್ಯಕ್ತಪಡಿಸಿದ್ದಾರೆ. ಭಾನುವಾರ ಅರಮನೆ ಮೈದಾನದಲ್ಲಿ ನಡೆದ ಕಾಂಗ್ರೆಸ್ ಪಕ್ಷದ 'ಸಂಕಲ್ಪ' ರ್‍ಯಾಲಿಯಿಂದಾಗಿ ಸಂಚಾರಕ್ಕೆ ಭಾರಿ ಅಡಚಣೆ ಉಂಟಾಗಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಸಾಧ್ಯವಾಗಿಲ್ಲ ಎಂಬ ಬಿಜೆಪಿಯ ಆರೋಪಗಳನ್ನು ಅವರು ತಳ್ಳಿಹಾಕಿದರು. ಸಾರ್ವಜನಿಕರಿಗೆ ಆಗುವ ಅನಾನುಕೂಲತೆಯನ್ನು ಕಡಿಮೆ ಮಾಡಲು ನಾವು ಭಾನುವಾರ ಕಾರ್ಯಕ್ರಮವನ್ನು ಆಯೋಜಿಸಿದ್ದೆವು. ಆರ್ ಸಿ ಕಾಲೇಜು ಕೇಂದ್ರಕ್ಕೆ ಹಂಚಿಕೆಯಾದ 720 ಅಭ್ಯರ್ಥಿಗಳಲ್ಲಿ ಕೇವಲ ಇಬ್ಬರು ಅಥವಾ ಮೂವರು ವಿದ್ಯಾರ್ಥಿಗಳು ಮಾತ್ರ ಪರೀಕ್ಷೆ ಬರೆಯಲು ಸಾಧ್ಯವಾಗಿಲ್ಲ ಎಂದು ಮಾಧ್ಯಮ ವರದಿಗಳು ತಿಳಿಸಿವೆ. ನಮ್ಮ ಕಾರ್ಯಕ್ರಮದ ಕಾರಣದಿಂದಾಗಿ ಅದು ಸಂಭವಿಸಿದ್ದರೆ, ನಾವು ವಿಷಾದ ವ್ಯಕ್ತಪಡಿಸುತ್ತೇವೆ ಎಂದು ಹರಿಪ್ರಸಾದ್ ಹೇಳಿದರು. ನಮ್ಮ ತಂಡವು ಬಾಧಿತ ವಿದ್ಯಾರ್ಥಿಗಳನ್ನು ಭೇಟಿ ಮಾಡುತ್ತದೆ ಮತ್ತು ಅವರು ಅನುಭವಿಸಿದ ನಷ್ಟವನ್ನು ಸರಿದೂಗಿಸಲು ನಾವು ಸಿದ್ಧರಿದ್ದೇವೆ ಎಂದು ಅವರು ಹೇಳಿದರು. ಕಾಂಗ್ರೆಸ್ ಕಾರ್ಯಕ್ರಮ ಬೆಳಿಗ್ಗೆ 11 ಗಂಟೆಗೆ ಪ್ರಾರಂಭವಾಯಿತು, ಆದರೆ ನೀಟ್ ಪರೀಕ್ಷೆ ಮಧ್ಯಾಹ್ನ 1.30 ಕ್ಕೆ ನಿಗದಿಯಾಗಿತ್ತು ಎಂದು ಹರಿಪ್ರಸಾದ್ ಹೇಳಿದರು.

ವಿಮಾನ ನಿಲ್ದಾಣದಲ್ಲಿ ಕಾದಿದ್ದ ಮೋದಿ ಅವರನ್ನು ನೋಡಿ ಕಲಿಯಲಿ' ಎಂಬ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಹರಿಪ್ರಸಾದ್, ಎಷ್ಟು ನಿಮಿಷ ಕಾದರು ಯಾವ ಹೆಲಿಕಾಪ್ಟರ್‌ನಲ್ಲಿ ಹೋದರು.

## ಪ್ರಿಯಕರನ ಜೊತೆ ಸೇರಿ ತಂದೆ-ತಾಯಿ- ಸೋದರಿಯ ಬರ್ಬರ ಕೊಲೆ: ಬೆಂಗಳೂರಿನ ಕೆಆರ್ ಪುರದಲ್ಲಿ ಘಟನೆ

• ಉದಯವಾಹಿನಿ, ಬೆಂಗಳೂರು

ಕೆಆರ್ ಪುರಂನ ಸೀಗೆಹಳ್ಳಿಯಲ್ಲಿ ಒಂದೇ ಕುಟುಂಬದ ಮೂವರ ಬರ್ಬರ ಹತ್ಯೆ ನಡೆದಿದೆ. ಪ್ರಿಯಕರ ಕೆನತ್ ಜೊತೆ ಸೇರಿ ಪುತ್ರಿ ಶ್ವೇತಾಳಿಂದ ಈ ಕೃತ್ಯ ನಡೆದಿದೆ ಎನ್ನಲಾಗಿದೆ. ತಂದೆ ಸೋಮ ಸುಂದರ (55) ತಾಯಿ ಮುತ್ತುಲಕ್ಷ್ಮಿ (48) ಹಾಗೂ ಸೋದರಿ ಸುಪ್ರಿಯಾ (20) ಕೊಲೆಯಾದವರು. ಅಕ್ಕ ಶ್ವೇತಾಳೇ ಈ ಕೃತ್ಯ ನಡೆಸಿರುವ ಶಂಕೆ ಇದೆ.

ಪ್ರಿಯಕರ ಕೆನತ್ ಜೊತೆ ಶ್ವೇತಾ ಲಿವ್-ಇನ್ ರಿಲೇಷನ್ ಶಿಪ್ ನಲ್ಲಿದ್ದ ಹಿನ್ನಲೆ , ಇದನ್ನು ಮನೆಯ ಕುಟುಂಬಸ್ಥರು ವಿರೋಧಿಸಿದ್ದರು. ಹೀಗಾಗಿ ಅವರ ಕೊಲೆ ಮಾಡಿದ್ದಾರೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಕೆ ಆರ್ ಪುರಂ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಮಾರಕಾಸ್ತ್ರಗಳಿಂದ ಇರಿದು ಮೂವರನ್ನೂ ಕೊಂದಿರುವ ಶಂಕೆ ಇದೆ. ಶ್ವೇತಾ ಲಿವ್ ಇನ್ ರಿಲೇಷನ್ ಶಿಪ್ ನಲ್ಲಿ ವಾಸವಿದ್ದ ಮನೆಗೆ ತಾಯಿ, ಸೋದರಿ, ಬಂದಾಗ ಮೊದಲು ಅವರನ್ನು ಮಾರಕಾಸ್ತ್ರ ಬಳಸಿ ಮಗಳು ಹಾಗೂ ಆಕೆಯ ಪ್ರಿಯಕರ ಕೆನತ್ ಕೊಲೆ ಮಾಡಿದ್ದಾರೆ. ಕೆನತ್ ಹಾಗೂ ಶ್ವೇತ ಜೊತೆಯಾಗಿ ತಾಯಿ, ಸೋದರಿ ಮೇಲೆ ಮಾರಕಾಸ್ತ್ರದಿಂದ ದಾಳಿ ಮಾಡಿದ್ದಾರೆ. ನಂತರ ಮನೆಗೆ ಬಂದ ಸೋಮಸುಂದರ್ ಅವರನ್ನೂ ಬೆನ್ನಟ್ಟಿ ಅಪಾರ್ಟ್ ಮೆಂಟ್ ಕಟ್ಟಡದ ನೆಲಮಹಡಿಯಲ್ಲಿ ಕೊಲೆಯಾಗಿದೆ. ತಕ್ಷಣವೇ ಆಸ್ಪತ್ರೆಗೆ ದಾಖಲಿಸಿದರೂ ಬದುಕುಳಿಸಲು ಸಾಧ್ಯವಾಗದೇ ಮೃತಪಟ್ಟಿದ್ದಾರೆ. ಶ್ವೇತಾ 30 ಲಕ್ಷ ಸಾಲವನ್ನು ಕೂಡಾ ಮಾಡಿದ್ದಳು.

# ಫ್ಲೈಓವರ್ ನಿರ್ಮಿಸುತ್ತಿರುವಾಗ ರಸ್ತೆಗೆ ವೈಟ್‌ಟಾಪಿಂಗ್ ಏಕೆ?

## ವೈಟ್ ಟಾಪಿಂಗ್ ಕಾಮಗಾರಿ ನಡೆಯುವ ಎಲ್ಲಾ ಸ್ಥಳಗಳಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳಬೇಕು

• ಉದಯವಾಹಿನಿ,ಬೆಂಗಳೂರು

ಜೆಸಿ ರಸ್ತೆಯಿಂದ ಎನ್‌ಆರ್ ರಸ್ತೆಗೆ ಫ್ಲೈಓವರ್ ನಿರ್ಮಿಸಲಾಗುತ್ತದೆ ಎಂದು ತಿಳಿದಿದ್ದರೂ ನೀವು ರಸ್ತೆಯನ್ನು (ಜೆಸಿ ರಸ್ತೆಯಿಂದ ಎನ್‌ಆರ್ ರಸ್ತೆಗೆ) ವೈಟ್‌ಟಾಪಿಂಗ್ ಮಾಡಿರುವುದು ಏಕೆ? ಇದರಿಂದ ಹಣ ವ್ಯರ್ಥವಲ್ಲವೇ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದ್ದಾರೆ.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರ ಈ ಪ್ರಶ್ನೆಗಳಿಗೆ ಬೆಂಗಳೂರು ಬೃಹತ್ ಯೋಜನೆಗಳ ಅನುಷ್ಠಾನಕ್ಕೆ ರಚನೆಯಾಗಿರುವ ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನ (ಬಿಸ್ಮೈಲ್) ಅಧಿಕಾರಿಗಳು ನಿರುತ್ತರರಾದರು. ಇಂತಹ ಕೆಲಸ ಮುಂದೆ ಆಗಬಾರದು. ಸಮಗ್ರ ಯೋಜನೆ ರೂಪಿಸಿ, ಕಾರ್ಯಗತಗೊಳಿಸಬೇಕು' ಎಂದು ತಾಕೀತು ಮಾಡಿದರು.

ಬಿಸ್ಮೈಲ್ ಯೋಜನೆಗಳ ಪರಿಶೀಲನಾ ಸಭೆಯನ್ನು ನಡೆಸಿದ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, 'ಬೆಂಗಳೂರಿನ ದೀರ್ಘಕಾಲದ ಸಂಚಾರ ದಟ್ಟಣೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕುರಿತು ಸುದೀರ್ಘ ಚರ್ಚೆ ನಡೆಸಲಾಗಿದೆ. ಬಿ-ಸ್ಮೈಲ್ ವತಿಯಿಂದ ಸಂಚಾರ ಸಮಸ್ಯೆಗಳಿಗೆ ದೀರ್ಘಾವಧಿಯ ಪರಿಹಾರ ಒದಗಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈಗಾಗಲೇ ನೀಲನಕ್ಷೆ ರೂಪಿಸಿದ್ದು, ಅನೇಕ ಯೋಜನೆಗಳು ಅನುಷ್ಠಾನದ ಹಂತದಲ್ಲಿವೆ. ನಾನು ಯಾವುದೇ ಹೊಸ ಸಲಹೆ-ಸೂಚನೆಗಳನ್ನು ನೀಡಿಲ್ಲ.

ಈಗಾಗಲೇ ರೂಪಿಸಿರುವ ಯೋಜನೆಗಳನ್ನು ತ್ವರಿತವಾಗಿ ಮತ್ತು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಲಾಗಿದೆ' ಎಂದು ಹೇಳಿದರು. ನಗರದಲ್ಲಿ ಹೆಚ್ಚು ಸಂಚಾರ ದಟ್ಟಣೆ ಇರುವ ರಸ್ತೆಗಳು ಹಾಳಾದರೆ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ ಉಂಟಾಗುತ್ತದೆ.

ಈ ಹಿನ್ನೆಲೆಯಲ್ಲಿ 2016ರಿಂದ ಪ್ರಮುಖ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಮುಖ್ಯ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು, ಪದೇಪದೇ ಹಾಳಾಗುವುದನ್ನು ತಡೆಯಲು ಹಾಗೂ 20 ವರ್ಷಗಳಿಂದ 30 ವರ್ಷ ಬಾಳಿಕೆ ಬರುವ ರಸ್ತೆಗಳನ್ನು ನಿರ್ಮಿಸಲು ಈ ಕಾಮಗಾರಿ ಸಹಕಾರಿಯಾಗಲಿದೆ ಎಂದು ತಿಳಿಸಿದರು. ಒಂದು ಕಿ.ಮೀ. ವೈಟ್ ಟಾಪಿಂಗ್ ಕಾಮಗಾರಿಗೆ ಸುಮಾರು 10 ಕೋಟಿ ರು. ವೆಚ್ಚವಾಗುತ್ತದೆ. ಈ


ಉದಯವಾಹಿನಿ ಚಿತ್ರ

ರಸ್ತೆಗಳ ಬಾಳಿಕೆ ಅವಧಿಯಲ್ಲಿ ಡಾಂಬರೀಕರಣವನ್ನು ಐದಾರು ಬಾರಿ ಮಾಡಬೇಕಾಗಿದ್ದು, ಅದಕ್ಕೆ ಹೆಚ್ಚು ವೆಚ್ಚವಾಗುತ್ತದೆ. ಆದ್ದರಿಂದ ದೀರ್ಘಕಾಲ ಬಾಳಿಕೆ ಬರುವ, ಗುಂಡಿ ಮುಕ್ತ ರಸ್ತೆಗಳನ್ನು ನಿರ್ಮಿಸುವ ಉದ್ದೇಶದಿಂದ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದರು.

ರಸ್ತೆ ಬದಿಯಲ್ಲಿ ಸಾಮಗ್ರಿಗಳನ್ನು ರಾಶಿ ಮಾಡುವುದು, ಜೆಲ್ಲಿ ಹಾಕಿ ಹಾಗೆಯೇ ಬಿಡುವುದು ಹಾಗೂ ರಸ್ತೆ ಅಗೆದು ನಿರ್ಲಕ್ಷ್ಯವಹಿಸುವುದರಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಸಾರ್ವಜನಿಕರ ಸಮಸ್ಯೆಗಳನ್ನು ಅರಿತು ಕಾರ್ಯನಿರ್ವಹಿಸಬೇಕು. ಸ್ಥಳ ಪರಿಶೀಲನೆ ವೇಳೆ ಸಮಸ್ಯೆಗಳು ಕಂಡುಬಂದರೆ ಅವುಗಳನ್ನು ತಕ್ಷಣ ಪರಿಹರಿಸಬೇಕು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದೇನೆ' ಎಂದರು.

ಹೊರ ವರ್ತುಲ ರಸ್ತೆಯ ಮರುವಿನ್ಯಾಸಕ್ಕಾಗಿ 450 ಕೋಟಿ ರು. ವೆಚ್ಚದ ಸಮಗ್ರ ಯೋಜನೆ ರೂಪಿಸಲಾಗಿದೆ. ಮೆಟ್ರೊ ಕಾಮಗಾರಿಯೊಂದಿಗೆ ಈ ಯೋಜನೆಯನ್ನು ಏಕಕಾಲದಲ್ಲಿ ಆರಂಭಿಸಿದರೆ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಆದ್ದರಿಂದ ಸಂಚಾರ ಪೊಲೀಸರೊಂದಿಗೆ ಚರ್ಚಿಸಿ ಸೂಕ್ತ ಸಮಯದಲ್ಲಿ ಕಾಮಗಾರಿ ಆರಂಭಿಸಲಾಗುವುದು ಎಂದು ತಿಳಿಸಿದರು.

### ಉದ್ದದ ಸುರಂಗ ರಸ್ತೆ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಪ್ರಕ್ರಿಯೆ

ಉತ್ತರ-ದಕ್ಷಿಣಕ್ಕೆ 16.7 ಕಿ.ಮೀ. ಉದ್ದದ ಸುರಂಗ ರಸ್ತೆ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ. ಸಚಿವ ಸಂಪುಟದ ಅನುಮೋದನೆಯ ಬಳಿಕ ಯೋಜನೆ ಅನುಷ್ಠಾನಗೊಳ್ಳಲಿದೆ.

> ಎಲಿವೇಟೆಡ್ ಹಾಗೂ ಸುರಂಗ ರಸ್ತೆ ನಿರ್ಮಾಣವಾದ ನಂತರ ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಸಂಚಾರ ದಟ್ಟಣೆ ಉಂಟಾಗದಂತೆ ರಸ್ತೆ ಜಾಲವನ್ನು ಅಭಿವೃದ್ಧಿಪಡಿಸಲು ಅಧಿಕಾರಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ ಎಂದು ಹೇಳಿದರು. -ಸಚಿವ ಕೃಷ್ಣ ಬೈರೇಗೌಡ

### ಅಧಿಕಾರಿಗಳಿಗೆ ಎಚ್ಚರಿಕೆ

> 'ವೈಜ್ಞಾನಿಕ ರೀತಿಯಲ್ಲಿ ರಸ್ತೆಗಳನ್ನು ನಿರ್ಮಿಸುವುದರ ಜೊತೆಗೆ ಗುಣಮಟ್ಟದ ಪಾದಚಾರಿ ಮಾರ್ಗಗಳನ್ನೂ ನಿರ್ಮಿಸಲಾಗುತ್ತಿದೆ. ವೈಟ್ ಟಾಪಿಂಗ್ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ಯಾವುದೇ ಸಮಸ್ಯೆ ಇಲ್ಲ.
>
> ಅಧಿಕಾರಿಗಳು ಗುತ್ತಿಗೆದಾರರ ಮೇಲೆ ಒತ್ತಡ ಹೇರಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದ್ದೇನೆ' ಎಂದು ಮಾಹಿತಿ ನೀಡಿದರು.
>
> -ಸಚಿವ ಕೃಷ್ಣ ಬೈರೇಗೌಡ

**1** ಬಿಸ್ಮೈಲ್ ಯೋಜನೆಗಳ ಪರಿಶೀಲನಾ

**2** ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ

**3** ಬೆಂಗಳೂರಿನ ದೀರ್ಘಕಾಲದ ಸಂಚಾರ

### 150 ಕಿ.ಮೀ. ಎಲಿವೇಟೆಡ್ ಕಾರಿಡಾರ್

ನಗರದ ಸಂಚಾರ ದಟ್ಟಣೆಗೆ ದೀರ್ಘಾವಧಿಯ ಪರಿಹಾರ ಕಲ್ಪಿಸುವ ಉದ್ದೇಶದಿಂದ 150 ಕಿ.ಮೀ. ಉದ್ದದ ಎಲಿವೇಟೆಡ್ ಕಾರಿಡಾಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಇದರಲ್ಲಿ 75 ಕಿ.ಮೀ. ಉದ್ದದ ಕಾರಿಡಾರ್ ನಿರ್ಮಾಣಕ್ಕೆ ಟೆಂಡರ್ ಕರೆಯಲು ತೀರ್ಮಾನಿಸಲಾಗಿದೆ. ಇದಕ್ಕೆ ಅಗತ್ಯವಿರುವ ಎಲ್ಲಾ ರೀತಿಯ ಪೂರ್ವಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ಕೃಷ್ಣಬೈರೇಗೌಡ ಹೇಳಿದರು.

ಹೊರ ವರ್ತುಲ ರಸ್ತೆ ಮರು ವಿನ್ಯಾಸ: ಹೊರ ವರ್ತುಲ ರಸ್ತೆಯ ಮರುವಿನ್ಯಾಸಕ್ಕಾಗಿ 450 ಕೋಟಿ ರೂ. ವೆಚ್ಚದ ಸಮಗ್ರ ಯೋಜನೆ ರೂಪಿಸಲಾಗಿದೆ. ಮೆಟ್ರೋ ಕಾಮಗಾರಿಯೊಂದಿಗೆ ಈ ಯೋಜನೆಯನ್ನು ಏಕಕಾಲದಲ್ಲಿ ಆರಂಭಿಸಿದರೆ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ ಉಂಟಾಗುವ ಸಾಧ್ಯತೆ ಇದೆ.

ಆದ್ದರಿಂದ ಸಂಚಾರಿ ಪೆಲೀಸರೊಂದಿಗೆ ಚರ್ಚಿಸಿ ಸೂಕ್ತ ಸಮಯದಲ್ಲಿ ಕಾಮಗಾರಿ ಆರಂಭಿಸಲಾಗುವುದು ಎಂದು ಕೃಷ್ಣಬೈರೇಗೌಡ ತಿಳಿಸಿದರು.ಇನ್ನು ನಗರದ ಸಂಚಾರ ದಟ್ಟಣೆಯನ್ನು ಪರಿಣಾಮಕಾರಿಯಾಗಿ ಕಡಿಮೆಗೊಳಿಸಲು ಸಮಗ್ರ ಪರಿಹಾರ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ವೈಟ್ ಟಾಪಿಂಗ್ ರಸ್ತೆಗಳು, ಸುರಂಗ ಮಾರ್ಗಗಳು ಹಾಗೂ ಎಲಿವೇಟೆಡ್ ಕಾರಿಡಾಗಳನ್ನು ನಿರ್ಮಿಸಲಾಗುತ್ತಿದೆ.

## 23 ವರ್ಷದ ಯುವತಿಯ ಗರ್ಭಾಶಯ ತೆಗೆದುಹಾಕಲು ಹೈಕೋರ್ಟ್ ಪೋಷಕರಿಗೆ ಅನುಮತಿ, ಏನಿದು ಪ್ರಕರಣ

• ಉದಯವಾಹಿನಿ, ಬೆಂಗಳೂರು

ಅಪರೂಪದ ಪ್ರಕರಣವೊಂದರಲ್ಲಿ, ಹೈಕೋರ್ಟ್ 23 ವರ್ಷದ ಯುವತಿಯ ಗರ್ಭಾಶಯವನ್ನು ತೆಗೆದುಹಾಕಲು ಆಕೆಯ ಪೋಷಕರು ಸಲ್ಲಿಸಿದ್ದ ಮನವಿಗೆ ಅನುಮತಿ ನೀಡಿದೆ. ಈ ಶಸ್ತ್ರಚಿಕಿತ್ಸೆಯನ್ನು ನಗರದಲ್ಲಿರುವ ವಾಣಿ ವಿಲಾಸ ಆಸ್ಪತ್ರೆಯಲ್ಲಿ ನಡೆಸಲಾಗುವುದು.

ಯುವತಿಗೆ ತೀವ್ರ ಬೆಳವಣಿಗೆ ಮತ್ತು ಬೌದ್ಧಿಕ ಅಂಗವೈಕಲ್ಯ ಇದ್ದು, ದಿನನಿತ್ಯದ ಮೂಲಭೂತ ಕಾರ್ಯಗಳನ್ನು ಅರ್ಥಮಾಡಿಕೊಳ್ಳಲು, ನಿರ್ವಹಿಸಲು ಮತ್ತು ನಡೆಸಲು ಸಹ ಅಸಮರ್ಥಳಾಗಿರುವುದರಿಂದ ಹೈಕೋರ್ಟ್ ಮನಗಂಡು ಈ ಆದೇಶ ನೀಡಿದ್ದಾರೆ.

ವೈದ್ಯಕೀಯ ಮಂಡಳಿ ನೀಡಿದ ವರದಿಗಳು, ರೋಗಿಯ ಬೌದ್ಧಿಕ ಮತ್ತು ಶಾರೀರಿಕ ಬೆಳವಣಿಗೆಯ ಅಸಮರ್ಥತೆಯ ಸ್ವರೂಪ ಮತ್ತು ವ್ಯಾಪ್ತಿ, ಆಕೆಯ ಮಾಸಿಕ ಋತುಮತಿ ಸಂದರ್ಭದಲ್ಲಿ ಸ್ವತಂತ್ರವಾಗಿ ಸ್ವಚ್ಛತೆ ನಿರ್ವಹಿಸಲು ಅಸಮರ್ಥತೆ, ಪೋಷಕರು ಉಲ್ಲೇಖಿಸಿದ ವೈದ್ಯಕೀಯ ಸಮಸ್ಯೆಗಳು, ಯಾವುದೇ ವೈದ್ಯಕೀಯ ನಿರ್ಬಂಧಗಳಿಲ್ಲದಿರುವುದು ಹಾಗೂ ವೈದ್ಯಕೀಯ ಮಂಡಳಿಯ ಏಕಮತ ಶಿಫಾರಸುಗಳನ್ನು ಗಮನದಲ್ಲಿಟ್ಟುಕೊಂಡು, ಈ ಶಸ್ತ್ರಚಿಕಿತ್ಸೆ ರೋಗಿಯ ಭವಿಷ್ಯದ ಜೀವನದಲ್ಲಿ ಬೆಳವಣಿಗೆ, ಆರೋಗ್ಯ, ಗೌರವ ಮತ್ತು ಹಿತಾಸಕ್ತಿಗೆ ಒಳಿತು ಎಂದು ನ್ಯಾಯಾಲಯ ಹೇಳಿದೆ. ಯುವತಿಯ ಪೋಷಕರು ಬೆಂಗಳೂರಿನ ಯಲಹಂಕ ತಾಲ್ಲೂಕಿನ ಒಂದು ಗ್ರಾಮದವರಾಗಿದ್ದು,


ಉದಯವಾಹಿನಿ ಚಿತ್ರ

ಅವರು ಸಲ್ಲಿಸಿದ್ದ ಅರ್ಜಿಯ ಮೇಲೆ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಈ ಆದೇಶ ನೀಡಿದ್ದಾರೆ. ಈ ಪ್ರಕರಣವು ಯಾವುದೇ ರೀತಿಯ ಜನಸಂಖ್ಯೆ ನಿಯಂತ್ರಣ ಅಥವಾ ಅಂಗವೈಕಲ್ಯದ ಆಧಾರದ ಮೇಲೆ ರೋಗಿಯ ಹಕ್ಕುಗಳನ್ನು ಕಡಿತಗೊಳಿಸುವ ಉದ್ದೇಶಕ್ಕೆ ಸಂಬಂಧಪಟ್ಟಿಲ್ಲ.

ಇದು ಸಂಪೂರ್ಣವಾಗಿ ಯುವತಿಯ ಭವಿಷ್ಯದ ಆರೋಗ್ಯ, ಸ್ವಚ್ಛತೆ, ಗೌರವ, ಸುರಕ್ಷತೆ ಮತ್ತು ಜೀವನದ ಗುಣಮಟ್ಟದ ವಿಚಾರಗಳಿಗೆ ಸಂಬಂಧಿಸಿದೆ ಎಂದು ನ್ಯಾಯಾಲಯ ಹೇಳಿದೆ.

## ವಿಶ್ರಾಂತಿ ಬಳಿಕ ಕರ್ತವ್ಯಕ್ಕೆ ಮರಳಿದ ಡಿಸಿಎಂ ಜಿ.ಪರಮೇಶ್ವರ್!

• ಉದಯವಾಹಿನಿ, ಬೆಂಗಳೂರು

ಅನಾರೋಗ್ಯದ ಕಾರಣ ಸುಮಾರು ಒಂದು ವಾರದಿಂದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರು ತಮ್ಮ ಕರ್ತವ್ಯಕ್ಕೆ ಮರಳಿದ್ದಾರೆ.

ವಿಧಾನಸೌಧದಲ್ಲಿ ಕಂದಾಯ ಇಲಾಖೆಯ ಪರಿಶೀಲನೆ ನಡೆಸಿದ ಅವರು, ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಮತ್ತು ದೀರ್ಘಕಾಲದವರೆಗೆ ಬಾಕಿ ಇರುವ ಅಧಿಕಾರಿಗಳಿಗೆ ಬಡ್ತಿ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಿಎಂ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿಯೂ ಅವರು ಭಾಗವಹಿಸಿದ್ದರು. ಕಳೆದ ಬುಧವಾರ, ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ, 232 ಗ್ರೇಡ್-2 ತಹಶೀಲ್ದಾರ್‌ಗಳನ್ನು ಗ್ರೇಡ್-1 ಗೆ ಬಡ್ತಿ ನೀಡುವ ಆದೇಶ ಹೊರಡಿಸಿದ್ದರು. ಈ ಬಾರಿ, ಮುಖ್ಯವಾಗಿ ಕಂದಾಯ ನಿರೀಕ್ಷಕರನ್ನು ಉಪ ತಹಶೀಲ್ದಾರ್‌ಗಳಾಗಿ ಬಡ್ತಿ ನೀಡುವ ಸಾಧ್ಯತೆಯಿದೆ.


ಉದಯವಾಹಿನಿ ಚಿತ್ರ

ಅವರು ತಳಮಟ್ಟದಲ್ಲಿ ಕೆಲಸ ಮಾಡುವ ಮತ್ತು ಜನರೊಂದಿಗೆ, ವಿಶೇಷವಾಗಿ ರೈತರೊಂದಿಗೆ ಪ್ರತಿದಿನ ಸಂವಹನ ನಡೆಸುವ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಇದರ ಉದ್ದೇಶವಾಗಿದೆ.

ಪರಮೇಶ್ವರ ಅವರು ಶನಿವಾರದ ಕೊನೆಯ ಸಚಿವ ಸಂಪುಟ ಸಭೆಗೆ ಗೈರುಹಾಜರಾಗಿದ್ದರು, ಏಕೆಂದರೆ ಅವರ ವೈದ್ಯರು ಕೆಲಸ ಮಾಡದಂತೆ ಸಲಹೆ ನೀಡಿದ್ದರು. ಭಾನುವಾರ ಕೆಪಿಸಿಸಿ ಮುಖ್ಯಸ್ಥರಾಗಿ ಬಿ.ಕೆ. ಹರಿಪ್ರಸಾದ್ ಪ್ರಮಾಣ ವಚನ ಸ್ವೀಕಾರಕ್ಕಾಗಿ ನಡೆದ ಪಕ್ಷದ ರ್‍ಯಾಲಿಗೂ ಅವರು ಗೈರುಹಾಜರಾಗಿದ್ದರು.

ಆದರೆ ಜೂನ್ 18 ರಂದು ವಿಧಾನಸೌಧದಲ್ಲಿ ಎಂಎಲ್‌ಸಿ ಚುನಾವಣೆಯಲ್ಲಿ ಮತ ಚಲಾಯಿಸಲು ವಿಧಾನಸೌಧಕ್ಕೆ ಆಗಮಿಸಿದ್ದರು. ಒಂದು ವಾರದ ಹಿಂದೆ ದೆಹಲಿಗೆ ಭೇಟಿ ನೀಡಿದ ನಂತರ, ಅವರಿಗೆ ಸೋಂಕು ತಗುಲಿತ್ತು, ಆದರೆ ಜೂನ್ 14 ರಂದು ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಅವರ ಬೆಂಬಲಿಗರು ಆಯೋಜಿಸಿದ್ದ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಇದು ಅವರ ಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತು ಮತ್ತು ಅಂದಿನಿಂದ ಅವರು ತಮ್ಮ ಮನೆಯಲ್ಲಿಯೇ ಇದ್ದರು.

## ಪಿಜಿ ಮಾಲೀಕನ ಮೇಲೆ ಬ್ಯಾಟ್‌ನಿಂದ ಹಲ್ಲೆ ನಡೆಸಿ ಕೊಲೆ; ಇಬ್ಬರು ಕಾಲೇಜು ವಿದ್ಯಾರ್ಥಿಗಳ ಬಂಧನ!

• ಉದಯವಾಹಿನಿ, ಬೆಂಗಳೂರು

ಇಬ್ಬರು ಕಾಲೇಜು ವಿದ್ಯಾರ್ಥಿಗಳು ಬ್ಯಾಟ್‌ನಿಂದ ಹಲ್ಲೆ ನಡೆಸಿದ ಆರೋಪದ ಮೇಲೆ ಪೇಯಿಂಗ್‌ಗೆಸ್ಟ್ ವಸತಿ ಸೌಕರ್ಯದ ಮಾಲೀಕ ಸಾವಿಗೀಡಾಗಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಮೃತ ವ್ಯಕ್ತಿಯನ್ನು ಮಾಧವ್ ಮಟ್ಲೆ (37) ಎಂದು ಗುರುತಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಸೋಮವಾರ ಸಂಜೆ 6.30ರ ಸುಮಾರಿಗೆ ಕಸ್ತೂರಿನಗರ ಮುಖ್ಯ ರಸ್ತೆಯ ಬಳಿಯಿರುವ ಪಿಜಿ ಮುಂದೆ ಈ ಘಟನೆ ನಡೆದಿದೆ. ಆರೋಪಿಗಳು ತಮ್ಮ ಆವರಣದೊಳಗೆ ಕಾಲು ತೊಳೆಯುವುದಕ್ಕೆ ಸಂತ್ರಸ್ಥ ಆಕ್ಷೇಪಿಸಿದ ನಂತರ ಈ ಘಟನೆ ನಡೆದಿದೆ. ಪ್ರಾಥಮಿಕ ಮಾಹಿತಿಯನ್ನು ಉಲ್ಲೇಖಿಸಿ, ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು, ರಾಕೇಶ್ ಮತ್ತು ಡಾನ್ ಬ್ರೈಟ್ ಸನ್ ಎಂಬುವವರು ಪಿಜಿ ಆವರಣದೊಳಗೆ ಟ್ಯಾಪ್ ನೀರನ್ನು ಬಳಸಿ ಕಾಲು ತೊಳೆಯುತ್ತಿದ್ದರು. ಇದಕ್ಕೆ ಮಾಲೀಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದು ಅವರ ನಡುವೆ ವಾಗ್ವಾದಕ್ಕೆ ಕಾರಣವಾಯಿತು. ಘಟನೆ ನಡೆದ ಪಿಜಿಯಲ್ಲಿ ಸ್ನೇಹಿತರಾದ ಇಬ್ಬರು ಆರೋಪಿಗಳು ತಂಗಿರಲಿಲ್ಲ. ಘಟನೆ ನಡೆದ ಸಮಯದಲ್ಲಿ ಅವರು ಮದ್ಯದ ಅಮಲಿನಲ್ಲಿದ್ದರೆಂದು ಆರೋಪಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.ಈ ಮಧ್ಯೆ, ಮಟ್ಲೆ ಆರೋಪಿಗಳಿಗೆ ಹೊಡೆಯಲು ಬ್ಯಾಟ್ ತಂದಿದ್ದಾರೆ.

# ಅಡ್ಡಾಡಿಗಳ ಬಗ್ಗೆ ಬಿಜೆಪಿ ದಿಲ್ಲಿ ವರಿಷ್ಠರಿಗೆ ವಿವರಣೆ

• ಉದಯವಾಹಿನಿ, ಬೆಂಗಳೂರು

ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನಕ್ಕೆ ಕಂಗೆಟ್ಟಿರುವ ಬಿಜೆಪಿಯಲ್ಲಿ ಆಂತರಿಕ ಭಿನ್ನಮತ ಸ್ಫೋಟಗೊಂಡಿದೆ. ಆಣೆಪ್ರಮಾಣದ ಹೇಳಿಕೆಯ ನಂತರ ಕೇಂದ್ರ ವರಿಷ್ಠರ ಕೆಂಗಣ್ಣಿಗೆ ಗುರಿಯಾಗಿರುವ ರಾಜ್ಯ ನಾಯಕರು ವರದಿ ಒಪ್ಪಿಸಲು, ಇಲ್ಲವೇ ತಲೆ ದಂಡಕ್ಕೆ ಸಿದ್ಧರಾಗಬೇಕಾದ ಪರಿಸ್ಥಿತಿ ಬಂದೊದಗಿದೆ. ಇದೇ ವೇಳೆ ರಾತ್ರಿ ಅಪಾರ್ಟ್‌ಮೆಂಟ್‌ನ ರಹಸ್ಯ ಕಾರ್ಯಾಚರಣೆಯ ಬಗ್ಗೆ ಹೇಳಿದ್ದರೂ, ಪಕ್ಷದ ಮುಖಂಡರು ಹೊಂದಾಣಿಕೆ ಮಾಡಿಕೊಂಡಿರುವ ವಿಚಾರವೂ ಮುನ್ನೆಲೆಗೆ ಬಂದಿದೆ.

ಪಕ್ಷದ ವರಿಷ್ಠರ ಜತೆ ಚರ್ಚಿಸುವ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಶಾಸಕಾಂಗ ಪಕ್ಷದ ನಾಯಕ ಆರ್.ಅಶೋಕ ದೆಹಲಿಗೆ ತೆರಳಿದ್ದು, ಮಂಗಳವಾರ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸೇರಿ ಇತರ ವರಿಷ್ಠರನ್ನು ಭೇಟಿ ಮಾಡಿ ಅಡ್ಡ ಮತದಾನದ ಬೆಳವಣಿಗೆಗಳ ಬಗ್ಗೆ ವಿವರಣೆ ನೀಡಲಿದ್ದಾರೆ.

ವಿಜಯೇಂದ್ರ ಮತ್ತು ಅಶೋಕ್ ಅವರು ಪ್ರತ್ಯೇಕವಾಗಿ ದೆಹಲಿಗೆ ಪ್ರಯಾಣಿಸಿದ್ದಾರೆ. ಮಂಗಳವಾರ ಇಡೀ ದಿನ ವಿವಿಧ ನಾಯಕರ ಭೇಟಿ ಮಾಡುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ವಿಜಯೇಂದ್ರ ಅವರು ಲಿಖಿತ ವಿವರಣೆ ಸಿದ್ಧಪಡಿಸಿಕೊಂಡಿದ್ದು,


ಉದಯವಾಹಿನಿ ಚಿತ್ರ

**ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನಕ್ಕೆ ಕಂಗೆಟ್ಟಿರುವ ಬಿಜೆಪಿಯಲ್ಲಿ ಆಂತರಿಕ ಭಿನ್ನಮತ ಸ್ಫೋಟಗೊಂಡಿದೆ.**

> ಮತದಾನದ ವಿಚಾರಕ್ಕೆ ಸಂಬಂಧಿಸಿದಂತೆ ಹೆಬ್ಬಾಳದ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ರಹಸ್ಯ ಸಭೆ ನಡೆಸಲಾಗಿದೆ ಎಂದು ಮಾಜಿ ಸಿಎಂ ಸದಾನಂದ ಗೌಡ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಅಲ್ಲದೇ ಪಕ್ಷದ ರಾಜ್ಯ ನಾಯಕರ ಉದಾಸೀನತೆಯೇ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಗೆಲುವಿಗೆ ಪ್ರಮುಖ ಕಾರಣ ಎಂದು ಚಾಟಿ ಬೀಸಿದ್ದಾರೆ. -ಸದಾನಂದ ಗೌಡ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಶಾಸಕಾಂಗ ಪಕ್ಷದ ನಾಯಕ ಆರ್.ಅಶೋಕ ದೆಹಲಿಗೆ

### ಯಾವುದೇ ಕ್ರಮ ಕೈಗೊಳ್ಳಲಿಲ

ನಾನು ತಕ್ಷಣವೇ ಅಲರ್ಟ್ ಆಗಿ ನಮ್ಮ ಪಕ್ಷದ ರಾಜ್ಯಾಧ್ಯಕ್ಷರಿಗೆ ಮತ್ತು ಆರ್.ಅಶೋಕ ಅವರಿಗೆ ಕರೆ ಮಾಡಿದೆ. ಆದರೆ ಇಬ್ಬರೂ ಸಿಗಲಿಲ್ಲ. ತಕ್ಷಣವೇ ರಾಜ್ಯ ಪ್ರಧಾನ ಕಾರ್ಯದರ್ಶಿಯೊಬ್ಬರಿಗೆ ಕರೆ ಮಾಡಿ ವಿಷಯ ತಿಳಿಸಿದೆ. ಅವರು 'ಸರಿ ನೋಡುತ್ತೇನೆ' ಎಂದರು. ಅದರ ಮರುದಿನವೇ ಅದೇ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ಪಕ್ಕದ ಮತ್ತೊಂದು ಅಪಾರ್ಟ್‌ಮೆಂಟ್ನಲ್ಲಿ ಎರಡನೇ ಸಭೆಯೂ ನಡೆಯಿತು. ಆಗಲೂ ನಾನು ಅದೇ ಪ್ರಧಾನ ಕಾರ್ಯದರ್ಶಿಗೆ ಕರೆ ಮಾಡಿ ಎಚ್ಚರಿಸಿದೆ. ಆದರೆ ನಮ್ಮವರು ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ಗೌಡರು ದೂರಿದ್ದಾರೆ.

ವರಿಷ್ಠರಿಗೆ ಸಲ್ಲಿಸಲಿದ್ದಾರೆ ಅನ್ನಲಾಗಿದೆ. ಅಡ್ಡಮತದಾನದ ಬೆಳವಣಿಗೆಯನ್ನು ಬಿಜೆಪಿ ವರಿಷ್ಠರು ಗಂಭೀರವಾಗಿ ತೆಗೆದುಕೊಂಡಿದ್ದು, ಯಾರು ಪಕ್ಷದ ಬೇಲಿ ಹಾರಿದ್ದಾರೋ ಭವಿಷ್ಯದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಆಗಬೇಕು ಎಂಬ ನಿಲುವು ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ವಿಜಯೇಂದ್ರ ಅವರು ರಾಷ್ಟ್ರೀಯ ಅಧ್ಯಕ್ಷರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಕ್ಕೆ ತಕ್ಕಂತೆ ಎಲ್ಲಾ ಮಾಹಿತಿಯೊಂದಿಗೆ ದಿಲ್ಲಿಗೆ ತೆರಳಿದ್ದಾರೆ ಎನ್ನಲಾಗಿದೆ.

ಈ ಮಧ್ಯೆ, ಪಕ್ಷಕ್ಕೆ ದ್ರೋಹ ಬಗೆದಿರುವುದು ಮಾತೆಗೆ ದ್ರೋಹ ಬಗೆದಂತೆ ಎಂದು ಹೇಳಿದ್ದ ವಿಜಯೇಂದ್ರ, ಧರ್ಮಸ್ಥಳದಲ್ಲಿ ಶಾಸಕರ ಸಭೆ ನಡೆಸಿ ಆಣೆ ಪ್ರಮಾಣದ ಮಾತನ್ನಾಡಿದ್ದರು. ಅಂತಿಮವಾಗಿ ಹಲವು ಹಿರಿಯ ನಾಯಕರು, ರಾಜಕೀಯ ಉದ್ದೇಶಗಳಿಗಾಗಿ ಪವಿತ್ರಸ್ಥಳವನ್ನು ಬಳಸದಂತೆ ಸಲಹೆ ನೀಡಿದ್ದನ್ನು ಪರಿಗಣಿಸಿ, ವಿಚಾರವನ್ನು ಕೈಬಿಟ್ಟಿದ್ದಾರೆ.

# ಜೂ.28ರಂದು ಎಸ್‌ಆರ್ ಎಸ್ ಬೆಟ್ಟದಲ್ಲಿ ಉಚಿತ ಸಾಮೂಹಿಕ ವಿವಾಹ

• **ಉದಯವಾಹಿನಿ, ರಾಮನಗರ**

ಅವ್ವೇರಹಳ್ಳಿ ರೇವಣಸಿದ್ದೇಶ್ವರ ಬೆಟ್ಟದ ದಾಸೋಹ ಮಠದಲ್ಲಿ ಜೂನ್ 28ರಂದು ಉಚಿತ ಸಾಮೂಹಿಕ ವಿವಾಹ ಮತ್ತು ಬಸವಲಿಂಗರಾಜ ಸ್ವಾಮೀಜಿಗಳವರ ಪ್ರಥಮ ವರ್ಷದ ಸಂಸ್ಮರಣೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ದಾಸೋಹ ಮಠದ ಹಿರಿಯ ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು. ತಾಲ್ಲೂಕಿನ ಕೈಲಾಂಚ ಹೋಬಳಿಯ ಅವ್ವೇರಹಳ್ಳಿ ದಾಸೋಹ ಮಠದಲ್ಲಿ ಸರಳ ವಿವಾಹ ಕಾರ್ಯಕ್ರಮದಲ್ಲಿ ನೋಂದಣಿ ಮಾಡಿಕೊಂಡ ವಧೂ-ವರರಿಗೆ ಸೀರೆ, ಬಟ್ಟೆ ವಿತರಿಸಿ ಪ್ರಚಾರ ರಥಕ್ಕೆ ಮಠದ ಆವರಣದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

ಶ್ರೀಮಠದ ನವೀಕೃತ ಕಟ್ಟಡ, ಹಿರಿಯ ಶ್ರೀಗಳ ಗದ್ದುಗೆ ಉದ್ಘಾಟನೆ, ಉಚಿತ ಸಾಮೂಹಿಕ ವಿವಾಹ, ಜನಜಾಗೃತಿ ಭಾವೈಕ್ಯ ಸಮಾರಂಭ ಕಾರ್ಯಕ್ರಮಗಳು


☛ ಉದಯವಾಹಿನಿ ಚಿತ್ರ

ಜೂ. 26, 27, 28ರ ಮೂರು ದಿನಗಳ ಕಾಲ ನಡೆಯಲಿವೆ ಎಂದರು. ಜೂ. 26 ರ ಶುಕ್ರವಾರ ಬೆಳಿಗ್ಗೆ 8:30ಕ್ಕೆ ಧ್ವಜಾರೋಹಣ ನೆರವೇರಲಿದ್ದು ಕನಕಪುರ ದೇಗುಲ ಮಠದ ಶ್ರೀ ಚನ್ನಬಸವ ಮಹಾಸ್ವಾಮೀಜಿ, ರಾಜಾಪುರ ಮಹಾಸಂಸ್ಥಾನ ಮಠದ ಶ್ರೀರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಬೇವೂರು ಮಠದ ಶ್ರೀಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿ, ವಿರಕ್ತ ಮಠದ ಶ್ರೀಶಿವರುದ್ರ ಸ್ವಾಮೀಜಿ, ಗುರುವಿನ ಪುರ ಮಠದ ಶ್ರೀಜಗದೀಶ ಶಿವಾಚಾರ್ಯ ಸ್ವಾಮೀಜಿ, ಅಖಿಲ ಭಾರತ ವೀರಶೈವ ಮಹಾಸಭಾದ ಹೆಚ್.ಎಸ್. ಯೋಗಾನಂದ್, ತಾಲ್ಲೂಕು ಅಧ್ಯಕ್ಷ ಎಂ.ಎಸ್. ಶಂಕರಪ್ಪ, ತಹಶೀಲ್ದಾರ್ ತೇಜಸ್ವಿನಿ, ವೀರಶೈವ ಸಂಘದ ತಾಲ್ಲೂಕು ಅಧ್ಯಕ್ಷ ಎಂ.ಆರ್. ಶಿವಕುಮಾರಸ್ವಾಮಿ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ವಿಭೂತಿಕೆರೆ ಶಿವಲಿಂಗಯ್ಯ, ತಾಪಂ ಮಾಜಿ ಸದಸ್ಯ ಅವ್ವೇರಹಳ್ಳಿ ಶಿವಲಿಂಗಯ್ಯ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಮಧ್ಯಾಹ್ನ 3ಕ್ಕೆ ಬಾಳೆಹೊನ್ನೂರು ರಂಭಾಪುರಿ ವೀರ ಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರ ಸೋಮೇಶ್ವರ ರಾಜ ದೇಶಿಕೇಂದ್ರ ಮಹಾಸ್ವಾಮೀಜಿಗಳವರು ಆಗಮಿಸಲಿದ್ದು ಜನಪದ ಕಲಾಮೇಳ, ಮಂಗಳವಾದ್ಯ, ಕಳಸ ಸಮೇತ ಶ್ರೀಗಳನ್ನು ರೇಣುಕಾಂಭ ದೇವಾಲಯದ ಆವರಣದಿಂದ ಮೆರವಣಿಗೆಯಲ್ಲಿ ಕರೆತರಲಾಗುತ್ತದೆ. ನಂತರ ಜೂ. 27ರ ಶನಿವಾರ ಬೆಳಿಗ್ಗೆ 7-30 ಗಂಟೆಗೆ ಶ್ರೀಮಠದಲ್ಲಿ ಶ್ರೀಗಳ ಇಷ್ಟಲಿಂಗಪೂಜೆ ಪೂಜೆ ಸಾಮೂಹಿಕ ಶಿವದೀಕ್ಷೆ ಕಾರ್ಯಕ್ರಮ ನೆರವೇರಲಿದೆ ಬೆಳಿಗ್ಗೆ 10 ಗಂಟೆಗೆ ಶ್ರೀಗಳಿಂದ ಧರ್ಮ ಸಂದೇಶ ಕಾರ್ಯಕ್ರಮ ಇರಲಿದ್ದು ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ, ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ, (ಶಶಿ), ಎಡಿಯೂರು ರಂಭಾಪುರಿ ಶಾಖಾ ಮಠದ ಶ್ರೀ ರೇಣುಕಾ ಶಿವಾಚಾರ್ಯ ಸ್ವಾಮೀಜಿ, ಅಂಕನಹಳ್ಳಿ ಗವಿಮಠದ ಶ್ರೀ ಶಿವರುದ್ರ ಸ್ವಾಮೀಜಿ ಸೇರಿದಂತೆ ಹಲವಾರು ಗಣ್ಯರು, ಮಠದ ಶ್ರೀಗಳು ಭಾಗವಹಿಸಲಿದ್ದಾರೆ ಎಂದರು. ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ 1008 ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದಂಗಳವರು ಆಗಮಿಸಲಿದ್ದು ಮೆರವಣಿಗೆ ಮೂಲಕ ಮಠಕ್ಕೆ ಕರೆತರಲಾಗುತ್ತದೆ.

## ಜಿಲ್ಲಾಧಿಕಾರಿಗಳಿಂದ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕಗಳಿಸಿದ ಮಕ್ಕಳಿಗೆ ವಿದ್ಯಾರ್ಥಿವೇತನ ವಿತರಣೆ


☛ ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಾಮರಾಜನಗರ**

ಜಿಲ್ಲಾಧಿಕಾರಿ ಶ್ರೀರೂಪ ಅವರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಜಿಲ್ಲೆಯ ವಿವಿಧ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ವತಿಯಿಂದ ನೀಡುವ 10 ಸಾವಿರ ರೂ. ಗಳ ವಿದ್ಯಾರ್ಥಿವೇತನ ವಿತರಿಸಿದರು.

ನಗರದ ಜಿಲ್ಲಾಧಿಕಾರಿಗಳ ಕೊಠಡಿಯಲ್ಲಿಂದು ಚಾಮರಾಜನಗರದಲ್ಲಿ ಶಾಖಾ ಕಚೇರಿ ಹೊಂದಿರುವ ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ಸಂಸ್ಥೆಯಲ್ಲಿ ಸದಸ್ಯರಾಗಿರುವ ತಲಾ 8 ಪೋಷಕರ ಮಕ್ಕಳಿಗೆ ಮುಂದಿನ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡುವ ಸಲುವಾಗಿ ನೀಡಲಾಗುವ ವಿದ್ಯಾರ್ಥಿವೇತನ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಿ ಶುಭ ಹಾರೈಸಿದರು. ಜಿಲ್ಲಾಧಿಕಾರಿ ಶ್ರೀರೂಪ ಅವರು ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಮಾತನಾಡಿ ಮುಂದಿನ ಹಂತದ ಶೈಕ್ಷಣಿಕ ವಿದ್ಯಾಭ್ಯಾಸದ ಬಗ್ಗೆ ಮಕ್ಕಳನ್ನು ವಿಚಾರಿಸಿದರು.

ಮಕ್ಕಳು ಉನ್ನತ ವಿದ್ಯಾಭ್ಯಾಸ ಪಡೆಯಬೇಕೆಂಬ ಅಭಿಲಾಷೆ ವ್ಯಕ್ತಪಡಿಸಿದರು. ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ವತಿಯಿಂದ ಸಂಸ್ಥೆಯಲ್ಲಿ ಸದಸ್ಯರಾಗಿರುವ ಪೋಷಕರ ಮಕ್ಕಳನ್ನು ಶೈಕ್ಷಣಿಕವಾಗಿ ಉತ್ತೇಜಿಸುವ ಸಲುವಾಗಿ ಕಳೆದ ಮೂರು ವರ್ಷಗಳಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ರೂಪದಲ್ಲಿ ಆರ್ಥಿಕ ನೆರವು ನೀಡಲಾಗುತ್ತಿದೆ ಎಂದರು.

# ಭೂಮಿ ವಿವಾದ ತಾರಕಕ್ಕೆ: ಹೋರಾಟದ ಎಚ್ಚರಿಕೆ

## ಜೂ.29ರಂದು ಜಿಲ್ಲಾವ್ಯಾಪಿ ಹೋರಾಟ ನಡೆಸುವ ಬಗ್ಗೆ ಮುಖಂಡರು ಜಿಲ್ಲಾಡಳಿತಕ್ಕೆ ಎಚ್ಚರಿಕೆ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

1972ರಲ್ಲಿ ದಲಿತರಿಗೆ ಮಂಜೂರಾಗಿರುವ ಭೂಮಿ ಈವರೆಗೆ ಅವರಿಗೆ ಬದುಕು ಕೊಟ್ಟಿತ್ತು. ಈಗ ಏಕಾಏಕಿ ಅರಣ್ಯ ಇಲಾಖೆ ಎಂಬ ಗುಮ್ಮತೋರಿಸಿ ಬದುಕು ಕಸಿಯಲು ಹೊರಟಿರು ವುದು ಸರಿಯಲ್ಲ. ಈ ವಿವಾದವನ್ನು ತಕ್ಷಣ ಇತ್ಯರ್ಥಪಡಿಸಬೇಕು. ಇಲ್ಲದಿದ್ದರೆ ಜೂ.29ರಂದು ಜಿಲ್ಲಾದ್ಯಂತ ತಾಲ್ಲೂಕು ಅರಣ್ಯ ಇಲಾಖೆ ಕಚೇರಿಗಳ ಎದುರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಹೋರಾಟಗಾರರು ಎಚ್ಚರಿಕೆ ನೀಡಿದರು.

ನಗರ ಹೊರವಲಯ ಜಿಲ್ಲಾ ಉಪ ಅರಣ್ಯಾಧಿಕಾರಿಗಳ ಕಚೇರಿ ಎದುರು ಕಳೆದ 8 ದಿನಗಳಿಂದ ದಸಂಸ ನೇತೃತ್ವದಲ್ಲಿ ನಡೆಯುತ್ತಿರುವ ಅನಿರ್ದಿಷ್ಟ ಧರಣಿ ಸ್ಥಳದಲ್ಲಿ ತುರ್ತಾಗಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮುಖಂಡರು ಮಾತನಾಡಿದರು.

ದಸಂಸ ಜಿಲ್ಲಾ ಸಂಚಾಲಕ ಸಿ.ಜಿ.ಗಂಗಪ್ಪ ಮಾತನಾಡಿ, 1972ರಲ್ಲಿ ದಲಿತರಿಗೆ ಭೂಮಿ ಮಂಜೂರಾಗಿದ್ದು, ಇದಕ್ಕೆ ಸಂಬಂಧಪಟ್ಟ ಸಮಗ್ರ ದಾಖಲಾತಿಗಳು ಸಾಗುವಳಿ ಮಾಡುತ್ತಿರುವ 13 ದಲಿತ ಕುಟುಂಬಗಳ ಹೆಸರಿನಲ್ಲಿಯೇ ಇದೆ. ಆದರೆ 1991ರಲ್ಲಿ ಕಂದಾಯ ಇಲಾಖೆ ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಿದೆ ಎನ್ನುತ್ತಾರೆ.


☛ ಉದಯವಾಹಿನಿ ಚಿತ್ರ

**1** ಅನ್ಯಾಯ ಖಂಡಿಸಿ ನ್ಯಾಯಕ್ಕೆ ಆಗ್ರಹಿಸಿ

**2** 1972ರಲ್ಲಿ ದಲಿತರಿಗೆ ಭೂಮಿ ಮಂಜೂರಾ

**3** ಪ್ರತಿನಿಧಿ ಗೊಂದಲ ನಿವಾರಣೆ ಬದಲಿಗೆ

**ತಹಶೀಲ್ದಾರ್ ರಶ್ಮಿ ಅವರ ಕಾರ್ಯವೈಖರಿಯನ್ನು ತೀವ್ರವಾಗಿ ಟೀಕಿಸಿದ ಮುಖಂಡರು, ಈ ಸಮಸ್ಯೆಗೆ ಕಾರಣರಾಗಿರುವ ಅಧಿಕಾರಿಯ ವಿರುದ್ಧ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಜೂ.29 ರೊಳಗೆ ಸಮಸ್ಯೆ ಬಗೆಹರಿಯದಿದ್ದರೆ ಬೃಹತ್ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು. - ಸಂಚಾಲಕ ಕೆ.ಸಿ.ರಾಜಾಕಾಂತ್**

**1991-92ರಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಭೂಮಿ ಹಸ್ತಾಂತರ ಮಾಡುವಾಗ, ಈಗಾಗಲೇ ಜನರು ಸಾಗುವಳಿ ಮಾಡುತ್ತಿದ್ದ ಭೂಮಿಯ ಕುರಿತು ಯಾಕೆ ಪರಿಶೀಲನೆ ನಡೆಸಲಿಲ್ಲ ಎಂಬ ಪ್ರಶ್ನೆಯನ್ನೂ ಅವರು ಮುಂದಿಟ್ಟರು.**
**-ಸಂಚಾಲಕ ಕೆ.ಸಿ.ರಾಜಾಕಾಂತ್**

**ಅರಣ್ಯ ಇಲಾಖೆಗೂ ಯಾವುದೇ ಸಂಬಂಧವಿಲ್ಲ**

**ಜಿಲ್ಲಾ ಅರಣ್ಯಾಧಿಕಾರಿಗಳು ನಿಮ್ಮ ಉಳುಮೆಯ ಭೂಮಿಗೂ ಅರಣ್ಯ ಇಲಾಖೆಗೂ ಯಾವುದೇ ಸಂಬಂಧವಿಲ್ಲ ಎಂದು ಒಮ್ಮೆ ಹೇಳಿದರೆ ಮತ್ತೊಮ್ಮೆ ನಿಮ್ಮ ಭೂಮಿ ನಮ್ಮ ಸರಹದ್ದಿನಲ್ಲಿಯೇ ಬರುತ್ತಿದೆ ಎಂದು ಹೇಳುತ್ತಾ ಗೊಂದಲ ಮೂಡಿಸಿದ್ದಾರೆ.**

ಹೀಗೆ ಮಾಡುವಾಗ ತಾನೇ ಮಂಜೂರು ಮಾಡಿರುವ ಭೂಮಿಯ ಬಗ್ಗೆ ಅದಕ್ಕೆ ಅರಿವು ಇರಬೇಕಿತ್ತು ಅಲ್ಲವೆ? ಅದೆಲ್ಲಾ ಹೋಗಲಿ ಅರಣ್ಯ ಇಲಾಖೆ ತನಗೆ ಸೇರದ ಭೂಮಿಯನ್ನು ಇಷ್ಟು ವರ್ಷಗಳ ಕಾಲ ಯಾಕೆ ಸುಪರ್ಧಿಗೆ ಪಡೆಯಲು ಮುಂದಾಗಲಿಲ್ಲ. ಈಗಲೇ ಯಾಕೆ ಮುಂದಾಗಿದೆ. ಇದನ್ನೆಲ್ಲಾ ನೋಡಿದರೆ ಯಾವುದೋ ಕಾಣದ ಕೈಗಳು ಇದರ ಹಿಂದೆ ನಿಂತಿ ಆಟವಾಡುತ್ತಿರುವುದು ಸ್ಪಷ್ಟವಾಗಿದೆ ಎಂದ ಅವರು ಬಡವರಿಗೆ ನ್ಯಾಯ ದೊರಯುವವರೆಗೆ ಈ ಹೋರಾಟ ನಿಲ್ಲುವುದಿಲ್ಲ ಎಂದರು. ರಾಜ್ಯ ಸಂಚಾಲಕ ಕೆ.ಸಿ.ರಾಜಾಕಾಂತ್ ಮಾತನಾಡಿ, ಬಡವರಿಗೆ ಆಗುತ್ತಿರುವ ಅನ್ಯಾಯ ಖಂಡಿಸಿ ನ್ಯಾಯಕ್ಕೆ ಆಗ್ರಹಿಸಿ ಒಂದು ವಾರದಿಂದ ಉಪ ಅರಣ್ಯ ಇಲಾಖೆ ಎದುರು ಪ್ರತಿಭಟನೆ ನಡೆಸುತ್ತಿದ್ದೇವೆ. ಈ ವಿಚಾರ ಗಂಭೀರವಾದರೂ ಕೂಡ ಈವರೆಗೆ ತಹಶೀಲ್ದಾರಾಗಲಿ ಜಿಲ್ಲಾಧಿಕಾರಿಗಳಾಗಲಿ ಮುಂದೆ ಬಂದು ಅರಣ್ಯ ಇಲಾಖೆ ಅಧಿಕಾರಿಗಳು ರೈತರೊಟ್ಟಿಗೆ ಚರ್ಚಿಸಿ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕಾಗಿತ್ತು.

ಕೆಲಸ ಆಗದಿರುವುದು ನೋಡಿದರೆ ಇವರಿಗೆ ಜನಪರ ಕಾಳಜಿಗಿಂತ ಶ್ರೀಮಂತರ ಹಿತಕಾಯುವುದೇ ದೊಡ್ಡ ಕಾಯಕವಾಗಿದೆ ಎನಿಸುತ್ತಿದೆ ಎಂದು ದೂರಿದರು. ಸ್ಪಷ್ಟ ಉತ್ತರ ನೀಡುತ್ತಿಲ್ಲ ಎಂದು ಆರೋಪಿಸಿದರು.

# ವಿದ್ಯುತ್ ಖಾಸಗೀಕರಣಕ್ಕೆ ರೈತರ ವಿರೋಧ

• **ಉದಯವಾಹಿನಿ, ಮೈಸೂರು**

15 ಜಿಲ್ಲೆಗಳಿಗೆ ವಿದ್ಯುತ್ ಸರಬರಾಜು ಮಾಡಲು ಟಾಟಾ ಪವರ್ ಕಾರ್ಪೊರೇಶನ್‌ಗೆ ಪರವಾನಗಿ ಕೊಡಬಾರದೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ವಿಜಯನಗರದಲ್ಲಿರುವ ಚೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಜನ ಸಾಮಾನ್ಯರ ತೆರಿಗೆ ಹಣದಿಂದ ಸ್ಥಾಪನೆಯಾಗಿರುವ ಸರ್ಕಾರಿ ಸ್ವಾಮ್ಯದ ವಿದ್ಯುತ್ ಪ್ರಸರಣ ಮತ್ತು ವಿದ್ಯುತ್ ಉತ್ಪಾದನಾ ಇಲಾಖೆಗಳನ್ನು ಯಾವುದೇ ಕಾರಣಕ್ಕೂ ಖಾಸಗಿ ಒಡೆತನಕ್ಕೆ ಬಿಟ್ಟುಕೊಡಬಾರದು. ರಾಜ್ಯದ ಜನರು ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಮೂಲ ಮಾಲೀಕರಾಗಿರುತ್ತಾರೆ. ಮಾಲೀಕರು ಒಪ್ಪದ ಹೊರತು ಯಾವುದೇ ಸಂಸ್ಥೆಯನ್ನು ಖಾಸಗೀಕರಣಕ್ಕೆ ಹಸ್ತಾಂತರ ಮಾಡುವಂತಿಲ್ಲ. ಮೂಲ ಸೌಕರ್ಯ ವಲಯಗಳ ಖಾಸಗೀಕರಣ ಜನ ವಿರೋಧಿ ಹಾಗೂ ಬಂಡವಾಳ ಶಾಹಿಗಳ ಪರವಾದ ನಿಲುವಾಗಿರುತ್ತದೆ ಎಂದು ಆಕ್ಷೇಪಿಸಿದರು.

ಖಾಸಗಿ ಕಂಪನಿಗಳಿಗೆ ಲಾಭ ಮಾತ್ರ ಮೂಲ ಉದ್ದೇಶವಾಗಿರುತ್ತದೆಯೇ ಹೊರತು ರಾಜ್ಯದ ಸಾಮಾನ್ಯ ಜನರಿಗಾಗಲಿ ಅಥವಾ ಆ ಸಂಸ್ಥೆಗೆ ಕೆಲಸ ಮಾಡುವ ನೌಕರರಿಗಾಗಲಿ ಮಾನ್ಯತೆ ಇರುವುದಿಲ್ಲ.


☛ ಉದಯವಾಹಿನಿ ಚಿತ್ರ

ಖಾಸಗೀಕರಣದಿಂದ ಜನಪರ ಸರ್ಕಾರಗಳು ಸಾಮಾಜಿಕ ಬದ್ಧತೆಯ ಕಾಳಜಿ ಇರದ ಯಾವ ಕಾರ್ಯಕ್ರಮವನ್ನೂ ಅನುಷ್ಠಾನ ಮಾಡುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ ದಿನದಂದೇ 2400 ಚದರ ಅಡಿ ಒಳಗಡೆ ಇರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಯಾವುದೇ ಕ್ಲಿಯರೆನ್ಸ್ ಬೇಕಾಗಿರುವುದಿಲ್ಲ ಎಂದು ಘೋಷಣೆ ಮಾಡಿದ್ದಾರೆ. ಆದರೆ, ಮೈಸೂರಿನ ನಗರ ಮತ್ತು ಕಂದಾಯ ಪ್ರದೇಶದಲ್ಲಿ 2400 ಒಳಗಡೆ ಇರುವ ವಿಸ್ತೀರ್ಣದ ಮನೆಗಳಿಗೆ 50 ಸಾವಿರದಿಂದ 1 ಲಕ್ಷದವರೆಗೆ ಲಂಚದ ಬೇಡಿಕೆಯನ್ನು ಚೆಸ್ಕಾಂ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಇಡುತ್ತಾರೆ. ಇದರ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

**ನೂರಾರು ಕೋಟಿ ಹಗರಣ**

**ಮೈಸೂರಿನ ಸೆಸ್ಕ್ ವಿರುದ್ಧ ನೂರಾರು ಕೋಟಿ ಹಗರಣದ ದೋಷಾರೋಪ ವರದಿಯಾಗಿದ್ದು, ಅದರ ಮೇಲೆ ಏನು ಕ್ರಮಕೈಗೊಳ್ಳಲಾಗಿದೆ. ಇಲಾಖೆಯಲ್ಲಿ ದೊಡ್ಡ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದ ಪುತ್ರನಿಗೆ ಟೆಂಡರ್ ಕೊಡಲಾಗಿದೆ. ಯಾವುದೇ ಬ್ಯಾಂಕ್ ಗ್ಯಾರಂಟಿಗಳಿಲ್ಲದೆ ಟೆಂಡರ್ ಕೊಟ್ಟು ನಿಯಮಗಳನ್ನು ಗಾಳಿಗೆ ತೂರಲಾಗಿದೆ.**

## ಮತಪಟ್ಟಿಯಿಂದ ಕೈಬಿಡದಿರಲು ಎಚ್ಚರವಹಿಸಿ

• **ಉದಯವಾಹಿನಿ, ಮಂಡ್ಯ**

ಕೋಲಾರ, - ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ ಪ್ರತಿಯೊಂದು ಮತವೂ ಅಮೂಲ್ಯವಾಗಿದ್ದು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಇದರ ಬಗ್ಗೆ ಎಚ್ಚರಿಕೆ ವಹಿಸಬೇಕಿದೆ' ಎಂದು ಶಾಸಕ ಕೊತ್ತೂರು ಮಂಜುನಾಥ್ ತಿಳಿಸಿದರು. ನಗರದ ಹೊರವಲಯದ ಖಾಸಗಿ ರೆಸಾರ್ಟ ನಲ್ಲಿ ಕಾಂಗ್ರೆಸ್‌ಪಕ್ಷದಿಂದ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ನಡೆದ ಬಿಎಲ್‌ಎ- 2 ತರಬೇತಿ ಶಿಬಿರದಲ್ಲಿ ಮಾತನಾಡಿದ ಅವರು ಮತದಾರರ ಪರಿಷ್ಕರಣೆ ಅತ್ಯಂತ ಸೂಕ್ಷ್ಮ ವಿಚಾರವಾಗಿದ್ದು, ಸಂವಿಧಾನವು ಪ್ರತಿಯೊಬ್ಬ ಪ್ರಜೆಗೂ ಮತದಾನದ ಹಕ್ಕನ್ನು ನೀಡಿದೆ.

ಅಂದು ಇಲ್ಲದಿದ್ದರೆ ವ್ಯಕ್ತಿಯ ಅಸ್ತಿತ್ವವೇ ಕಳೆದುಕೊಂಡಂತಾಗುತ್ತದೆ. ಆದ್ದರಿಂದ ಅರ್ಹ ಮತದಾರರ ಹೆಸರನ್ನು ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

# ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾದ ಕಾರು : ನಾಲ್ವರು ಪ್ರಾಣಾಪಾಯದಿಂದ ಪಾರು

• **ಉದಯವಾಹಿನಿ, ಗುಂಡ್ಲುಪೇಟೆ**

ಚಾಮರಾಜನಗರ ಮಾರ್ಗವಾಗಿ ವೇಗವಾಗಿ ಬಂದ ಕೆ ಎ 05 ಎನ್ ಇ 0368 ನೋಂದಣಿಯ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಹಳ್ಳಕ್ಕೆ ಪಲ್ಟಿಯಾಗಿರುವ ಘಟನೆ ಪಟ್ಟಣದ ಕಲ್ಯಾಣಿ ಕೊಳದ ಬಳಿ ಮಂಗಳವಾರ ಬೆಳಿಗ್ಗೆ ಸಂಭವಿಸಿದ್ದು ಅದೃಷ್ಟವಶಾತ್ ಕಾರಿನಲ್ಲಿದ್ದ ನಾಲ್ವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಂಡ್ಯ ಮೂಲದ ಕೆ ಎಂ ದೊಡ್ಡಿಯ ಇಬ್ಬರು ಯುವತಿಯರು ಮತ್ತಿಬ್ಬರು ಯುವಕರ ಜೊತೆ ಉಡಿಗಾಲ ಗ್ರಾಮದ ಸಹಪಾಠಿಯನ್ನ ಭೇಟಿಯಾಗಿ ವಾಪಾಸಾಗುತ್ತಿದ್ದಾಗ ಪಟ್ಟಣದ ಹೊರವಲಯದ ಆದರ್ಶ ಶಾಲೆ ಬಳಿಯ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕೆ ಪಲ್ಟಿಯಾಗಿದೆ, ಅತಿ ವೇಗವಾಗಿ ಬಂದ ಕಾರು ಸೇತುವೆ ಬದಿಯ ಕಬ್ಬಿಣದ ಸೂಚನಾ ಫಲಕಕ್ಕೆ ರಭಸವಾಗಿ ಗುದ್ದಿ ಕಂದಕಕ್ಕೆ ಉರುಳಿದೆ, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾದ ನಾಲ್ವರನ್ನು ಆಸ್ಪತ್ರೆಗೆ ಸೇರಿಸಿದ ಸ್ಥಳೀಯರು ಪ್ರಥಮ ಚಿಕಿತ್ಸೆ ಕೊಡಿಸಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ.

ಘಟನಾ ಸಂಬಂದ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


☛ ಉದಯವಾಹಿನಿ ಚಿತ್ರ

**ಮಕ್ಕಳ ಸಂಚಾರಕ್ಕೂ ಸಹಕಾರಿ**

**ಗುಂಡ್ಲುಪೇಟೆ ಚಾಮರಾಜನಗರ ಮಾರ್ಗದಲ್ಲಿ ಇತ್ತೀಚೆಗೆ ಅಪಘಾತ ಪ್ರಕರಣಗಳು ಹೆಚ್ಚಾಗುತ್ತಿವೆ, ಆದರ್ಶ ಶಾಲಾ ಬಳಿಯ ತಿರುವು ಸೇರಿದಂತೆ ಹಲವೆಡೆ ಸಂಬಂದಪಟ್ಟ ಇಲಾಖೆ ನಿಧಾನವಾಗಿ ಚಲಿಸುವಂತೆ ಎಚ್ಚರಿಕೆ ಸೂಚನಾ ಫಲಕಗಳನ್ನ ಅಳವಡಿಸಬೇಕು, ಇದೆ ಮಾರ್ಗದಲ್ಲಿ ಆದರ್ಶ ಶಾಲೆಯಿದ್ದು ಮಕ್ಕಳ ಸಂಚಾರಕ್ಕೂ ಸಹಕಾರಿಯಾಗುತ್ತದೆ.**

# ರಾಮನಗರದಲ್ಲಿ ಶೃಂಗೇರಿ ಶ್ರೀಗಳ ವಿಜಯಯಾತ್ರೆ

## ಶಾರದಾ ಪೀಠದ ವಿಧುಶೇಖರ ಶ್ರೀಗಳ ಭೇಟಿ | ಶ್ರೀ ಬಲಮುರಿ ಗಣಪತಿ ದೇವಾಲಯದ ಬ್ರಹ್ಮಕುಂಭಾಭಿಷೇಕ ಮಹೋತ್ಸವದಲ್ಲಿ ಭಾಗಿ

• **ಉದಯವಾಹಿನಿ, ರಾಮನಗರ**

ಶ್ರೀ ಬಲಮುರಿ ಗಣಪತಿ ದೇವಾಲಯದ ಬ್ರಹ್ಮಕುಂಭಾಭಿಷೇಕ ಮಹೋತ್ಸವವನ್ನು ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಶ್ರೀಗಳು ನಡೆಸಿಕೊಡಲಿದ್ದಾರೆ ಎಂದು ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ವಿದ್ಯಾ ಚೌಡೇಶ್ವರಿ ಮಠದ ಶ್ರೀ ವಿದ್ಯಾನಂದ ಸ್ವಾಮಿ ತಿಳಿಸಿದರು. ಇಲ್ಲಿನ ಶ್ರೀ ಬಲಮುರಿ ಗಣಪತಿ ದೇವಾಲಯದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ತಿಂಗಳಲ್ಲಿ ಧರ್ಮ ವಿಜಯ ಯಾತ್ರೆ ಹಮ್ಮಿಕೊಂಡಿದ್ದಾರೆ. ಈ ಪ್ರಯುಕ್ತ ರಾಮನಗರಕ್ಕೆ ಭೇಟಿ ನೀಡಲಿದ್ದು, ಶ್ರೀ ಬಲಮುರಿ ಗಣಪತಿ ದೇವಾಲಯದಲ್ಲಿ ಹಮ್ಮಿಕೊಳ್ಳಲಾಗಿರುವ ಬ್ರಹ್ಮಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದರು. ಜೂ.27ರ ಶನಿವಾರ ಸಂಜೆ ರಾಮನಗರಕ್ಕೆ ಶ್ರೀಗಳು ಆಗಮಿಸಲಿದ್ದು, ಅವರನ್ನು


☛ ಉದಯವಾಹಿನಿ ಚಿತ್ರ

ರಾಮನಗರ ರಾಜಬೀದಿಯಲ್ಲಿ ಪೂರ್ಣಕುಂಭಸ್ವಾಗತದೊಂದಿಗೆ ಭರ ಮಾಡಿಕೊಳ್ಳಲಾಗುತ್ತದೆ. ರಾಜಬೀದಿಯಲ್ಲಿ ಅವರನ್ನು ರಥದ ಮೂಲಕ ಕರೆ ತಂದು ದೇವಾಲಯದಲ್ಲಿ ವಿಶೇಷ ಪೂಜೆ ನಡೆಸಲಾಗುತ್ತದೆ. ಅಂದು ಸಂಜೆ ಪಾದಪೂಜೆ ನಡೆಸಲಾಗುತ್ತದೆ ಎಂದು ಹೇಳಿದರು. ಭಾನುವಾರ ಬೆಳಗ್ಗೆ 8 ಗಂಟೆಗೆ ಶ್ರೀ ಚಂದ್ರಮೌಳೇಶ್ವರ ಪೂಜೆ ನಡೆಸಲಿದ್ದಾರೆ. ಇದಾದ ಬಳಿಕ ಚತುರ್ದಶಿ ಮಹಾಕುಂಭಾಭಿಷೇಕದ ಅಂಗವಾಗಿ ಹೋಮ ನಡೆಯಲಿದ್ದು, ಜಗದ್ಗುರುಗಳ ಅಮೃತ ಹಸ್ತದಿಂದ ಶ್ರೀ ಬಲಮುರಿ ಮಹಾಗಣಪತಿ ಬ್ರಹ್ಮ ಕುಂಭಾಭಿಷೇಕ ಹಾಗೂ ಮಹಾಪೂಜೆ ನಡೆಯಲಿದೆ. ನಂತರ ಗುರುಗಳಿಂದ ಅನುಗ್ರಹ ಭಾಷಣ ಹಾಗೂ ಫಲ ಮಂತ್ರಾಕ್ಷತೆ, ನೀಡಲಿದ್ದಾರೆ. ಜತೆಗೆ ಅನ್ನಸಂತರ್ಪಣೆಯನ್ನ ಸಹ ಏರ್ಪಡಿಸಲಾಗಿದೆ ಎಂದರು.

ಜಗದ್ಗುರುಗಳು ಜೂನ್ ತಿಂಗಳಿನಲ್ಲಿ ಧರ್ಮ ವಿಜಯ ಯಾತ್ರೆಯನ್ನು ಹಮ್ಮಿಕೊಂಡಿದ್ದು, ರಾಮನಗರದಿಂದಲೇ ವಿಜಯ ಯಾತ್ರೆಯನ್ನು ಆರಂಭ ಮಾಡಲಿದ್ದಾರೆ. ರಾಮನಗರವೂ ಐತಿಹಾಸಿಕವಾಗಿ ಹಾಗೂ ಪೌರಾಣಿಕವಾಗಿ ಸಾಕಷ್ಟು ಹಿನ್ನೆಲೆಯನ್ನು ಹೊಂದಿದೆ. ಹಾಗಾಗಿ ದೇವಾಲಯದ ಮಂಡಳಿ ಅವರು ದೇವಾಲಯದ ಮಹಾ ಕುಂಭಾಭಿಷೇಕ ಮಹೋತ್ಸವಕ್ಕೆ ಜಗದ್ಗುರುಗಳನ್ನು ಆಹ್ವಾನಿಸಿದ್ದರು. ಗುರುಗಳು ಸಹ ಖುಷಿಯಿಂದಲೇ ಕಾರ್ಯಕ್ರಮದಲ್ಲಿ ಭಾಗಿ ಯಾಗುವುದಾಗಿ ತಿಳಿಸಿದ್ದಾರೆ ಎಂದರು. ಜಗದ್ಗುರುಗಳ ಆಗಮನದ ಹಿನ್ನೆಲೆಯಲ್ಲಿ ದೇವಾಲಯದ ಆಡಳಿತ ಮಂಡಳಿ ವತಿಯಿಂದ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಕಾರ್ಯಕ್ರಮದ ಹಿನ್ನೆಲೆಯಲ್ಲಿ ಶನಿವಾರ ರಾತ್ರಿ ಜಗದ್ಗುರುಗಳು ಇಲ್ಲಿಯೇ ವಾಸ್ತವ್ಯ ಹೂಡಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬಲಮುರಿ ಗಣಪತಿ ದೇವಾಲಯದ ಪ್ರಧಾನ ಅರ್ಚಕ ಗಣೇಶ್ ಭಟ್, ದೇವಾಲಯ ಟ್ರಸ್ಟ್‌ನ ಅಧ್ಯಕ್ಷ ಟಿ.ರಂಗರಾಜು. ಖಜಾಂಚಿ ಬಿಕೆಕೆ ಹರ್ಷವರ್ಧನ್, ಪ್ರಮುಖರಾದ ಪಿ.ವಿ.ಪ್ರಭಾಕರ್, ಆರ್.ವಿ.ಸುರೇಶ್, ಬಿಜೆಪಿ ಮಂಜು, ಕುಮಾರ್, ಮಾಲ್ತೇಶ್, ಚೇತನ್ ಗೌಡ, ರಾಹುಲ್ ರೆಡ್ಡಿ, ಹೆಚ್. ಎಲ್.ಚೇತನ್, ಸ್ವರ್ಣೇಶ್, ಪುರುಷೋತ್ತಮ ರೆಡ್ಡಿ, ಅಕ್ಷಯ್, ಕಿರಣ್, ಮೋಹಿತ್, ಶಿವಕುಮಾರ್ ಹಾಗೂ ಇತರರು ಇದ್ದರು.

**ದೂರುದಾರ ಮಹೇಶಪ್ಪ ಮಾಲೂರು(ಅನಾಮಿಕ) ಎಂಬ ವ್ಯಕ್ತಿ ದೂರಿನಲ್ಲಿ ಉಲ್ಲೇಖಿಸಲಾಗಿರುವ ಕುಡಿಯನೂರು ಗ್ರಾಮವೂ ವಾಸ್ತವವಾಗಿ ಮಾಲೂರು ತಾಲ್ಲೂಕಿನ ಕಸಬಾ ಹೋಬಳಿಗೆ ಸೇರಿದ್ದು, ಅದರೆ ಆರೋಪಿಸಿರುವಂತೆ ಕುಡಿಯನೂರು ಲಕ್ಕೂರು ಹೋಬಳಿಗೆ ಬರುವುದಿಲ್ಲ. ಪ್ರಸ್ತುತ ಲಕ್ಕೂರು ಹೋಬಳಿಯ ರಾಜಸ್ವ ನಿರೀಕ್ಷಕರಾಗಿ ಶ್ರೀಪತಿ ಎಂಬುವರು ಕಾರ್ಯನಿರ್ವಹಿಸುತ್ತಿದ್ದಾರೆ. ಅದರೆ ದೂರುದಾರಿಗೆ ಕುಡಿಯನೂರು ಮತ್ತು ಲಕ್ಕೂರಿನಲ್ಲಿ ಯಾರು ಕಾರ್ಯನಿರ್ವಹಿಸುತ್ತಿದ್ದಾರೆಂಬ ಕನಿಷ್ಠ ಜ್ಞಾನವೂ ಸಹ ಇಲ್ಲದೆ ಆಧಿಕಾರಿ ಅರುಣ್‌ಕುಮಾರ್ ಅವರ ಹೆಸರು ದುರುದ್ದೇಶಪೂರ್ವಕವಾಗಿ ಬಳಸಿಕೊಂಡಿರುವ ಹಿಂದೆ ಕಾಣದ ಕೈಗಳ ಕುತಂತ್ರವಿದೆ ಎಂದು ದೂರಿದ್ದಾರೆ.**

# ಕಂದಾಯ ಅಧಿಕಾರಿಗಳ ವಿರುದ್ಧ ಅಧಾರ ರಹಿತ ಆರೋಪ


☛ ಉದಯವಾಹಿನಿ ಚಿತ್ರ

**ಸತ್ಯಕ್ಕೆ ದೂರವಾಗಿರುವ ಆರೋಪದ ಪ್ರಕರಣವನ್ನು ಕೈ ಬಿಟ್ಟು ಮಾಲೂರು ತಾಲ್ಲೂಕಿನ ಕಂದಾಯ ಅಧಿಕಾರಿಗಳಿಗೆ ನ್ಯಾಯ ಒದಗಿಸಿ ಕೊಡಬೇಕಾಗಿದೆ ಎಂದು ಒತ್ತಾಯಿಸಿದರು. -ಹೂಹಳ್ಳಿ ಪ್ರಕಾಶ್**

**ಶಿಸ್ತು ಕ್ರಮ ಜರುಗಿಸ ಬಾರದು**

**ಜೂ,16 ರಂದು ಜಾರಿ ಮಾಡಲಾಗಿರುವ ಆದೇಶವನ್ನು ಕೂಡಲೇ ತಡೆ ಹಿಡಿಯಬೇಕು. ತನಿಖಾ ಸಮಿತಿಯಿಂದ ವರದಿ ಬರುವವರೆಗೆ ಆರೋಪ ಮಾಡಿರುವಂತ ಅಧಿಕಾರಿಗಳ ವಿರುದ್ಧ ಯಾವುದೇ ಪೂರ್ವಗ್ರಹ ಪೀಡಿತ ಶಿಸ್ತು ಕ್ರಮ ಜರುಗಿಸಬಾರದು. ತನಿಖಾ ವರದಿ ಬಂದ ನಂತರ ತಪ್ಪಿಸ್ಥರ ವಿರುದ್ಧ ಕ್ರಮ ಜರುಗಿಸಬೇಕೆಂದು ಮನವಿ ಮಾಡಿದರು.**

**ಮಾಲೂರು ಮಹೇಶಪ್ಪ ಎಂಬುವವರು ಕುಡಿಯನೂರು ಗ್ರಾಮದ ನಿವಾಸಿಯೇ ಅಲ್ಲ, ಸಾರ್ವಜನಿಕ ಹಿತಾಸಕ್ತಿಯ ಹೆಸರಿನಲ್ಲಿ ಕೇವಲ ವೈಯುಕ್ತಿಕ ದ್ವೇಷ ಅಥಾವ ಬ್ಲಾಕ್ ಮೇಲ್ ತಂತ್ರಕ್ಕಾಗಿ ಸತ್ಯಕ್ಕೆ ದೂರವಾದ ಸುಳ್ಳು ಮತ್ತು ಅಧಾರ ರಹಿತ ಅರ್ಜಿಯನ್ನು ಸಲ್ಲಿಸಲಾಗಿದ್ದು, ಕಂದಾಯ ಅಧಿಕಾರಿ ಹಾಗೂ ಇತರೇ ನಿಷ್ಠಾವಂತ ಅಧಿಕಾರಿಗಳ ತೇಜೋವಧೆ ಮಾಡಲು ಸಂಚು ರೂಪಿಸಲಾಗಿದೆ ಎಂದು ಗಂಭೀರವಾಗಿ ಆರೋಪಿಸಿದರು. -ಮಹೇಶಪ್ಪ ಮಾಲೂರು**

**ಹಿಂದೆ ಕಾಣದ ಕೈಗಳ ಕುತಂತ್ರವಿದೆ**

• **ಉದಯವಾಹಿನಿ, ಕೋಲಾರ**

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಅಧಿಕಾರಿ ಅರುಣ್‌ಕುಮಾರು(ರಾಜಸ್ವನಿರೀಕ್ಷಕ). ಕುಡಿಯನೂರು ಗ್ರಾಮ ಆಡಳಿತ ಅಡಳಿತಾಧಿಕಾರಿ ದಿನೇಶ್ ಗೌಡ, ಹಾಗೂ ಮಾಲೂರು ತಹಶೀಲ್ದಾರ ರೂಪಾ ಈ ಅಧಿಕಾರಿಗಳು ಕುಡಿಯನೂರು ಗ್ರಾಮದ ಸರಕಾರಿ ಜಾಗ, ದಲಿತರ ಸ್ಮಶಾನ, ಮತ್ತು ಕೆರೆ ಅಂಗಳವನ್ನು ಒತ್ತುವರಿ ಮಾಡಲು ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ನಕಲಿ ದಾಖಲೆ ಸೃಷ್ಟಿಸಿದ್ದಾರೆ ಎಂದು ದೂರುದಾರ ಅನಾಮಿಕ ಮಹೇಶಪ್ಪ ಎಂಬುವರು ನೀಡಿರುವ ದೂರು ಸತ್ಯಕ್ಕೆ ದೂರವಾಗಿದ್ದು, ಈ ಕೂಡಲೇ ಅಧಾರ ರಹಿತ ಹಾಗು ಸುಳ್ಳು ದೂರನ್ನು ಕೂಲಂಕುಶವಾಗಿ ಪರಿಶೀಲನೆ ನಡೆಸಬೇಕು ಎಂದು ಕರ್ನಾಟಕ ದಲಿತ ಸಿಂಹ ಸೇನೆ ರಾಜ್ಯಾಧ್ಯಕ್ಷ ಹೂಹಳ್ಳಿ ಪ್ರಕಾಶ್ ಜಿಲ್ಲಾಧಿಕಾರಿ ಡಾ.ಎಂ.ಅರ್.ರವಿ ಅವರಿಗೆ ಅಗ್ರಹ ಪಡಿಸಿದ್ದಾರೆ. ಈ ಸಂಬಂಧವಾಗಿ ಮಾದ್ಯಮದವರೊಂದಿಗೆ ತಮ್ಮ ಕಚೇರಿಯಲ್ಲಿ ಮಾತನಾಡಿ ಮಾಲೂರು ತಾಲ್ಲೂಕು ಕಂದಾಯ ಇಲಾಖೆಯ ಅಧಿಕಾರಿಗಳ ವಿರುದ್ಧ ಸಲ್ಲಿಕೆಯಾಗಿರುವ ಪಟ್ಟ ಭದ್ರ ಹಿತಸಕ್ತರ ದೂರು ಸಾರ್ವಜನಿಕರನ್ನು ದಿಕ್ಕ ತಪ್ಪಿಸುವ ಉದ್ದೇಶವಾಗಿದೆ.

ಈ ಆರೋಪದಲ್ಲಿ ಯಾವೂದೇ ವಾಸ್ತವಂಶ ಇಲ್ಲವೆಂದು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. ದೂರುದಾರರ ಆರೋಪದಲ್ಲಿ ಕುಡಿಯನೂರು ಗ್ರಾಮದಲ್ಲಿ ಕೆರೆ, ಸ್ಮಶಾನ, ಹಾಗೂ ಯಾವುದೇ ಸರಕಾರಿ ಜಾಗದ ಒತ್ತುವರಿಗೆ ಕಾನೂನುಬಾಹಿರ ಪ್ರಚೋದನೆ ನೀಡಿರುವುದಿಲ್ಲ ಮತ್ತು ನಕಲಿ ದಾಖಲೆ ಸೃಷ್ಟಿಸಿರುವುದಿಲ್ಲ ಎಂದ ಅವರು ದೂರುದಾರ ಈ ಅಧಾರರಹಿತ ಅರ್ಜಿಯನ್ನು ಪುರಸ್ಕರಿಸಿ, ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಕಂದಾಯ ಇಲಾಖೆ) ಅಧಿಕಾರಿಗಳನ್ನು ಕಾರ್ಯನಿರ್ವಾಹಕವಲ್ಲದ ಹುದ್ದೆಗಳಿಗೆ ನೇಮಕ ಮಾಡುವಂತೆ ಆದೇಶಿಸಿರುವುದು ಕರ್ತವ್ಯ ನಿಷ್ಠೆ ಅಧಿಕಾರಿಗಳ ನೈತಿಕ ಸ್ಥರ್ಯವನ್ನು ಕುಗ್ಗಿಸುವಂತಿದೆ ಎಂದು ಕಳವಳ ವ್ಯಕ್ತ ಪಡಿಸಿದರು. ಈ ಕೂಡಲೇ ಜಿಲ್ಲಾಧಿಕಾರಿಗಳು ಈ ಪ್ರಕರಣವನ್ನು ಕೂಲಂಕುಶವಾಗಿ ವಾಸ್ತವಿಕವಾಗಿ ಪರಿಶೀಲಿಸ ಬೇಕಾಗಿದ್ದು, ಹಾಗೂ ಈ ಸಂಬಂಧವಾಗಿ ಶಿಸ್ತಿನ ತನಿಖಾ ಸಮಿತಿಯನ್ನು ರಚಿಸಿ ಸೂಕ್ತ ವಾಸ್ತವ ವರದಿಯನ್ನು ಪಡೆದುಕೊಳ್ಳಬೇಕಾಗಿದೆ.



# ಮಿನಿ ನ್ಯೂಸ್


## ಜೆಸಿಬಿ ಡಿಕ್ಕಿ ಮಹಿಳೆ ಸಾವು: ಪತಿ ಗಂಭೀರ ಗಾಯ, ಮಗು ಅಪಾಯದಿಂದ ಪಾರು

• **ಉದಯವಾಹಿನಿ, ಪಿರಿಯಾಪಟ್ಟಣ**

ಬೆಟ್ಟದಪುರ ಮುಖ್ಯರಸ್ತೆಯಲ್ಲಿರುವ ಕಾನ್‌ವೆಂಟ್ ಸಮೀಪದಲ್ಲಿ ಜೆಸಿಬಿ ಹಾಗೂ ಬೈಕ್ ಗೆ ನಡುವೆ ಅಪಘಾತವಾಗಿ ಬೈಕ್ ಹಿಂಬದಿ ಸವಾರೆ ಅಂಜಲಿ(29) ಮೃತಪಟ್ಟಿದ್ದು, ಪತಿ ಸಾಗರ್ ಗಂಭೀರ ಗಾಯಗೊಂಡಿದ್ದಾರೆ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ

ಮೃತರು ಗ್ರಾಮದ ತೇರಿನ ಬೀದಿಯಲ್ಲಿ ವಾಸವಾಗಿದ್ದು, ಬೈಕ್‌ನಲ್ಲಿ ಇದ್ದ ದಂಪತಿಯ ಎರಡು ವರ್ಷದ ಮಗಳು ಅನಘಾ ಸಣ್ಣಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿದ್ದಾಳೆ. ಸಾಗರ್ ತಮ್ಮ ಪತ್ನಿ ಅಂಜಲಿ ಹಾಗೂ ಮಗಳು ಅನಘಾಳೊಂದಿಗೆ ಬೆಟ್ಟದಪುರದಿಂದ ಪಿರಿಯಾಪಟ್ಟಣದ ಕಡೆಗೆ ತೆರಳುತ್ತಿದ್ದ ವೇಳೆ, ಅವರ ಹಿಂದಿನಿಂದ ಬಂದ, ಜೆಸಿಬಿ ವಾಹನದ ಚಾಲಕ ಏಕಾಏಕಿ ವಾಹನವನ್ನು ಎಡಭಾಗಕ್ಕೆ ತಿರುಗಿಸಿದ ಪರಿಣಾಮ, ಜೆಸಿಬಿಯ ಬಕೆಟ್ ಬೈಕ್ ಹಿಂಭಾಗದಲ್ಲಿ ಕುಳಿತಿದ್ದ ಅಂಜಲಿಗೆ ತಾಕಿ ಅವರು ಕೆಳಗೆ ಬಿದ್ದಿದ್ದಾರೆ. ಅಪಘಾತದಲ್ಲಿ ಅಂಜಲಿ ಹಾಗೂ ಸಾಗರ್ ಇಬ್ಬರಿಗೂ ತಲೆಗೆ ಗಂಭೀರ ಗಾಯಗಳಾಗಿದ್ದು, ಸ್ಥಳೀಯರು ತಕ್ಷಣ ಅವರನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದಾರೆ. ಚಿಕಿತ್ಸೆಗೆ ಸ್ಪಂದಿಸದೆ ಅಂಜಲಿ ಮೃತಪಟ್ಟಿದ್ದಾರೆ. ಅಪಘಾತದ ಬಳಿಕ ಜೆಸಿಬಿ ಚಾಲಕ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ.

## ಮಧುಮೇಹವು ಇಂದಿನ ಅಗೋಚರ ಶತ್ರು


☛ ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮೈಸೂರು**

ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಈ ಅಭಿವೃದ್ಧಿಯ ಫಲವನ್ನು ಸಮಸ್ಯೆ ಬಂದಾಗ ಬಳಸಬೇಕು. ಆದರೆ, ಚೆನ್ನಾಗಿರುವಾಗಲೇ ಕ್ಷುಲ್ಲಕ ಕಾರಣಗಳಿಗೆ ಔಷಧ ಅವಲಂಬಿಸಬಾರದು. ಮಧುಮೇಹವು ಇಂದಿನ ಅಗೋಚರ ಶತ್ರು, ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಕುವೆಂಪುನಗರದ ಗಾನಭಾರತಿ ಸಭಾಂಗಣದಲ್ಲಿ ಶ್ರೀಹರಿ ಡಯಾಬಿಟೀಸ್ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಡಾ.ವಿ.ಲಕ್ಷ್ಮಿನಾರಾಯಣ್ ಮತ್ತು ಡಾ. ಸೂರಜ್ ತೇಜಸ್ವಿ ಅವರ ಮಧುಮೇಹ ಮನುಕುಲದ ಅಗೋಚರ ಶತ್ರು ಕೃತಿಯ 9ನೇ ಆವೃತಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದ ಅವರು, ಪೌಷ್ಟಿಕ ಆಹಾರ, ವ್ಯಾಯಾಮ ಮತ್ತು ಅಗತ್ಯವಿದ್ದಾಗ ಔಷಧ ಎಂಬ ತತ್ವ ಅನುಸರಿಸುವುದರಿಂದ ಆರೋಗ್ಯಕರ ಜೀವನಕ್ಕೆ ಉತ್ತಮ ಹಾದಿ ಸಿಗಲಿದೆ ಎಂದರು. ಆರೋಗ್ಯವಂತ ಸಮಾಜ ನಿರ್ಮಾಣ ನಮ್ಮ ಕೈಯಲ್ಲಿಯೇ ಇದೆ. ದಿನನಿತ್ಯ ಜೀವನದಲ್ಲಿ ಸಣ್ಣಪುಟ್ಟ ಬದಲಾವಣೆಯಿಂದ ಇದು ಸಾಧ್ಯ ಆಗುತ್ತದೆ. ಶಿಸ್ತು ಬದ್ಧ ಜೀವನದಿಂದ ಆರೋಗ್ಯಯುತವಾಗಿ ಇರಬಹುದು. ಭಾರತ ಸಾಂಸ್ಕೃತಿಕ ಹಾಗೂ ಪಾರಂಪರಿಕ ವೈದ್ಯ ಪದ್ಧತಿಯಲ್ಲಿ ಹಿಂದಿನಿಂದಲೂ ಪ್ರಗತಿ ಕಾಣುತ್ತಿದ್ದೇವೆ. ಆಧುನಿಕ ಕಾಲದಲ್ಲಿ ಅನುಸರಿಸುತ್ತಿರುವ ತಪ್ಪಾದ ಜೀವನಶೈಲಿಯಿಂದ ಅನೇಕ ಕಾಯಿಲೆ ಕಾಣಿಸಿಕೊಳ್ಳುತ್ತಿವೆ.

ಒತ್ತಡದ ನಡುವೆ ಜೀವನ ಶೈಲಿ ಬದಲಾಯಿಸಿಕೊಳ್ಳಬೇಕು ಎಂದರು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರಧಾನ ಗುರುದತ್ತ ಮಾತನಾಡಿ, ವಾಸ್ತವದಲ್ಲಿ ಈ ಕೃತಿಯು 12ನೇ ಮುದ್ರಣ ಇದು. ಕುವೆಂಪು ಭಾಷಾ ಭಾರತಿಯಿಂದ ಮೊದಲು ಪ್ರಕಟವಾಗಿ ಅಲ್ಲಿಯೂ 3 ಮೂರು ಮುದ್ರಣ ಕಂಡಿತ್ತು ಎಂದರು.

## ಮಲ್ಲಿಕಾರ್ಜುನ ಬಾಲದಂಡಿ ಅವರಿಂದ ಸಾರ್ವಜನಿಕರಿಂದ ದೂರು ಸ್ವೀಕಾರ

• **ಉದಯವಾಹಿನಿ, ಕೆ.ಆರ್ ನಗರ**

ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲ್ಲೂಕಿನಲ್ಲಿ ವಾರದಲ್ಲಿ ಒಂದು ಗ್ರಾಮ ಪಂಚಾಯತಿ ಮಟ್ಟದಲ್ಲಿ ಪೊಲೀಸ್ ಸಾರ್ವಜನಿಕ ಸಭೆ ಮಾಡಲು ಕ್ರಮ ವಹಿಸುತ್ತೇನೆ, ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಹೇಳಿದರು.

ಪಟ್ಟಣದ ಹಾಸನ-ಮೈಸೂರು ರಸ್ತೆಯಲ್ಲಿರುವ ಎಸ್.ಆರ್.ಎಂ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಪೊಲೀಸ್ ವತಿಯಿಂದ ಹಮ್ಮಿಕೊಂಡಿದ್ದ ಸಾರ್ವಜನಿಕರ ಕುಂದು ಕೊರತೆ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು ಸಾರ್ವಜನಿಕರಿಂದ ಹೆಚ್ಚಾಗಿ ಅವಳಿ ತಾಲ್ಲೂಕಿನಲ್ಲಿ ಮದ್ಯ ಮಾರಾಟ ದಿಂದ ಆಗುತ್ತಿರುವ ಸಮಸ್ಯೆಗಳ ಸಾರ್ವಜನಿಕರು ದೂರನ್ನು ನೀಡಿದ್ದಾರೆ ಈ ಸಂಬಂದ ಅಬಕಾರಿ ಡಿ.ಸಿ ಅವರ ಗಮನಕ್ಕೆ ತರಲಾಗುವುದು ಮುಂದಿನ ದಿನಗಳಲ್ಲಿ ಸಮಸ್ಯೆಗೆ ಪರಿಹಾರ ಕಲ್ಪಿಸಲಾಗುವುದು ಎಂದು ತಿಳಿಸಿದರು. ಮೈಕ್ರೋ ಫೈನಾನ್ಸ್ ನವರು ಮನೆಗಳ ಬಳಿ ಹೋಗಿ ಸಾಲಗಾರರಿಗೆ ಅವಮಾನ ಮಾಡಿ ಹಣ ಕೇಳಿದರೆ ಅಂತಹ ಮೈಕ್ರೋ ಫೈನಾನ್ಸ್ ವಿರುದ್ಧ ಕೇಸು ದಾಖಲಿಸಲಾಗುವುದು. ಹಾವಳಿ ತಡೆಯಲು ಕ್ರಮ ವಹಿಸಲಾಗಿದೆ, ಬೈಕ್ ಮತ್ತು ವಾಹನಗಳನ್ನು ಸೀಜ್ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಚ್ಚರಿಕೆ ನೀಡಿದರು. ಜಿಲ್ಲಾ ಪೊಲೀಸ್ ವತಿಯಿಂದ ಪ್ರತಿಯೊಂದು ತಾಲ್ಲೂಕಿನಕಿನ ಠಾಣೆಗಳಿಗೆ ಬೇಟಿ ನೀಡಿ ಸಾರ್ವಜನಿಕರ ಕಂದು ಕೊರತೆ, ಆಹ್ವಾಲು ಆಲಿಸಿ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಈಗಾಗಲೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು. ಕೆ.ಆರ್.ನಗರ ವಿಧಾನಸಭಾ ಕ್ಷೇತದಲ್ಲಿ ಎರಡು ಠಾಣೆಗಳಿದ್ದು ಗ್ರಾಮಾಂತರ ಠಾಣೆ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕೋರಲಾಗುವುದು ಎಂದರಲ್ಲದೆ ಪೊಲೀಸ್ ಇಲಾಖೆ ವತಿಯಿಂದ ಅಪರಾಧ ತಡೆಗಟ್ಟಲು ಸೂಕ್ತ ಕ್ರಮ ವಹಿಸುತ್ತೇನೆ ಎಂದು ಸಾರ್ವಜನಿಕರಿಗೆ ತಿಳಿಸಿದರು.

## ಪಟ್ಟಣದ ವಿವಿದೆಡೆ ಸಿಓ ಶರವಣ ರೌಂಡ್ಸ್

• **ಉದಯವಾಹಿನಿ, ಗುಂಡ್ಲುಪೇಟೆ**


☛ ಉದಯವಾಹಿನಿ ಚಿತ್ರ

ಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿದ ಸಿಓ ಶರವಣ ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 5 ಕೋಟಿ ವೆಚ್ಚದಲ್ಲಿ ಕೆ ಇ ಬಿ ರಸ್ತೆ ಸೇರಿದಂತೆ ವಿವಿಧ ಭಾಗಗಳಲ್ಲಿ ಚಾಲ್ತಿಯಲ್ಲಿರುವ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದ ಶರವಣ ಅಧಿಕಾರಿಗಳೊಟ್ಟಿಗೆ ಭೇಟಿ ನೀಡಿ ಪರಿಶೀಲಿಸುವ ಜೊತೆಗೆ ಮಾಹಿತಿ ಗುಣಮಟ್ಟ ಕುರಿತಾಗಿ ಮಾಹಿತಿ ಪಡೆದರು. ಸುರಭಿ ವೃತ್ತದಿಂದ ದುಂದಾಸನಪುರ ಗ್ರಾಮದ ರಸ್ತೆಗೆ ಸಂಪರ್ಕ ಕಲ್ಪಿಸುವ ಮಾರ್ಗ ಹಾಗೂ ಚರಂಡಿ ನಿರ್ಮಾಣ ಸೇರಿದಂತೆ ಕೇರಳ ತಮಿಳುನಾಡು ಮಾದರಿಯ ಪಾದಚಾರಿ ಮಾರ್ಗ ನಿರ್ಮಾಣ ಕಾಮಗಾರಿಯನ್ನ ಕೈಗೆತ್ತಿಕೊಂಡಿರುವ ಹಿನ್ನೆಲೆ ನಿಗಾವಹಿಸಲಾಗಿದೆ, ಕಾಮಗಾರಿ ವಿಚಾರದಲ್ಲಿ ಯಾವುದೇ ರಾಜಿಯಿಲ್ಲ ಹಾಗಾಗಿ ಉತ್ಕೃಷ್ಟ ಗುಣಮಟ್ಟಕ್ಕೆ ಪ್ರಾಶಸ್ತ್ಯ ನೀಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಈ ಸಂಧರ್ಭದಲ್ಲಿ ಕೆ ಆರ್ ಐ ಡಿ ಎಲ್ ಇಲಾಖೆಯ ತಾಂತ್ರಿಕ ಅಧಿಕಾರಿಗಳು ಹಾಜರಿದ್ದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ದುರ್ಬಲ ಆರ್ಥಿಕ ಸ್ಥಿತಿಯಿಂದ ಕೆಲವು ಪ್ರಮುಖ ಕೆಲಸಗಳು ಸ್ಥಗಿತಗೊಳ್ಳುತ್ತವೆ. ಹೊಸ ಹೂಡಿಕೆಗಳನ್ನು ಮಾಡುವಾಗ ಸ್ವತಂತ್ರರಾಗಿರಿ ಮತ್ತು ನಿಮ್ಮ ಸ್ವಂತ ನಿರ್ಧಾರಗಳನ್ನು ಕೈಗೊಳ್ಳಿ. ಧೃತಿಗೆಡಬೇಡಿ – ವೈಫಲ್ಯಗಳು ಸಹಜ ಅವುಗಳು ಜೀವನದ ಸೌಂದರ್ಯವಾಗಿವೆ.

**ವೃಷಭ** ನೀವು ನಿಮ್ಮ ಸಮತೋಲನ ಕಾಯ್ದುಕೊಳ್ಳಬೇಕು ಮತ್ತು ಪರಿಸ್ಥಿತಿಯನ್ನು ನಿಭಾಯಿಸಲು ತಕ್ಷಣವೇ ಪ್ರತಿಕ್ರಿಯಿಸಬಾರದು. ಬುದ್ಧಿವಂತ ಹೂಡಿಕೆಗಳು ಮಾತ್ರ ಆದಾಯಗಳನ್ನು ನೀಡುತ್ತವೆ– ಆದ್ದರಿಂದ ನೀವು ಕಷ್ಟಪಟ್ಟು ಗಳಿಸಿದ ನಿಮ್ಮ ಹಣವನ್ನು ಎಲ್ಲಿ ಹೂಡಬಯಸುತ್ತೀರೆನ್ನುವಲ್ಲಿ ಖಚಿತತೆಯಿರಲಿ.

**ಮಿಥುನ** ಮಕ್ಕಳ ನಿಮ್ಮ ಇಚ್ಛೆಯಂತೆ ನಡೆದುಕೊಳ್ಳುವುದಿಲ್ಲ ಹಾಗೂ ಇದು ನಿಮಗೆ ಕೋಪ ತರುತ್ತದೆ. ಅನಿಯಂತ್ರಿತ ಕೋಪ ಸಾಮಾನ್ಯವಾಗಿ ಎಲ್ಲರನ್ನೂ, ಹಾಗೂ ವಿಶೇಷವಾಗಿ ಕೋಪಗೊಂಡವರನ್ನು ಹೆಚ್ಚು ಘಾಸಿಗೊಳಿಸುತ್ತದೆ. ಏಕೆಂದರೆ ಇದು ಶಕ್ತಿಯನ್ನು ಕುಂಠಿತಗೊಳಿಸುತ್ತದೆ .

**ಕರ್ಕಾಟಕ** ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ. ಇಂದು ನಿಮ್ಮ ಆಪ್ತರೊಂದಿಗೆ ಜಗಳವಾಗಬಹುದು.

**ಸಿಂಹ** ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು. ಇಂದು ಸಾಲಗಾರನು ನಿಮಗೆ ಹೇಳದೆ ನಿಮ್ಮ ಖಾತೆಗೆ ಹಣವನ್ನು ಸೇರಿಸಬಹುದು. ಇದರ ಬಗ್ಗೆ ತಿಳಿದು ನೀವು ಆಶ್ಚರ್ಯಚಕಿತರಾಗಬಹು ಮತ್ತು ಸಂತೋಷವು ಪಡೆಯಬಹುದು. ಕುಟುಂಬದ ಸದಸ್ಯರು ನಿಮ್ಮ ಜೀವನದಲ್ಲಿ ಒಂದು ವಿಶೇಷ ಸ್ಥಾನವನ್ನು ಹೊಂದಿರುತ್ತಾರೆ.

**ಕನ್ಯಾ** ನಿಮ್ಮ ಕಾಯಿಲೆ ಅತೃಪ್ತಿಯ ಕಾರಣವಾಗಿಬಹುದು. ಕುಟುಂಬದಲ್ಲಿ ಸಂತೋಷವನ್ನು ಪುನಃಸ್ಥಾಪಿಸಲು ನೀವು ಸಾಧ್ಯವಾದಷ್ಟೂ ಬೇಗ ಇದರಿಂದ ಹೊರಬರುವ ಅಗತ್ಯವಿದೆ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ.

**ತುಲಾ** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ ಆದರೆ ಅದು ನಿಮ್ಮ ಕೈಯಿಂದ ಜಾರಿಹೋಗದಿರಲು ಪ್ರಯತ್ನಿಸಿ.

**ವೃಶ್ಚಿಕ** ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸೆಗಳನ್ನು ದೂರ ಮಾಡಬಹುದು.

**ಧನಸ್ಸು** ಇಂದು ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ. ಇಂದು ನೀವು ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ ಸಾಮಾಜಿಕ ಸಮಾರಂಭಗಳು ಪ್ರಭಾವಿ ಮತ್ತು ಪ್ರಮುಖ ಜನರೊಡನೆ ನಿಮ್ಮ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ.

**ಮಕರ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಬ್ಯಾಂಕ್ ವ್ಯವಹರಗಳಲ್ಲಿ ಕಾಳಜಿ ವಹಿಸಬೇಕು. ನಿಮ್ಮ ಕುಟುಂಬದೊಂದಿಗೆ ಸಾಮಾಜಿಕ ಚಟುವಟಿಕೆ ಎಲ್ಲರನ್ನೂ ಆರಾಮವಾಗಿ ಮತ್ತು ಆಹ್ಲಾದಕರ ಮನಸ್ಥಿತಿಯಲ್ಲಿಡುತ್ತದೆ. ಭಿನ್ನಾಭಿಪ್ರಾಯಗಳ ಕಾರಣ ವೈಯಕ್ತಿಕ ಸಂಬಂಧದಲ್ಲಿ ಬಿರುಕು ಬಿಡಬಹುದು.

**ಕುಂಭ** ನಗು ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಇಂದಿನವರೆಗೂ ಅಗತ್ಯವಿಲ್ಲದೆ ಹಣವನ್ನು ಖರ್ಚು ಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು ಮತ್ತು ಹಣವನ್ನು ಉಳಿಸಬೇಕು. ಕುಟುಂಬದ ಸದಸ್ಯರು ಅಥವಾ ಸಂಗಾತಿ ಕೆಲವು ಆತಂಕಗಳನ್ನು ಉಂಟುಮಾಡುತ್ತಾರೆ.

**ಮೀನ** ಒಬ್ಬ ಸಂತನಿಂದ ಆಧ್ಯಾತ್ಮಿಕ ಜ್ಞಾನ ಸಾಂತ್ವನ ಮತ್ತು ಆರಾಮವನ್ನು ಒದಗಿಸುತ್ತದೆ. ನೀವು ನಿಮ್ಮ ಕೋಪವನ್ನು ನಿಯಂತ್ರಿಸಿ ಮತ್ತು ಕಚೇರಿಯಲ್ಲಿ ಎಲ್ಲರೊಂದಿಗೆ ಉತ್ತಮವಾಗಿ ವರ್ತಿಸಿ., ಆಗೇ ನೀವು ಮಾಡದಿದ್ದರೆ ನಿಮ್ಮ ಕೆಲಸ ಹೋಗಬಹುದು. ಸಂಜೆ ಸ್ನೇಹಿತರೊಡನೆ ಹೋಗಿ, ಇದು ತುಂಬ ಒಳ್ಳೆಯದನ್ನು ಮಾಡುತ್ತದೆ.

# ಸಮಾಜದ ನೋವಿಗೆ ಅಕ್ಷರಗಳ ಸ್ಪಂದನೆ ನೀಡಿರುವ ವಿಶ್ವಾಸ್ ಡಿ. ಗೌಡರ 'ವರ್ಷವಿಡಿ ಶ್ರಾವಣ' : ಬಾ.ನಂ. ಲೋಕೇಶ್

• **ಉದಯವಾಹಿನಿ ಹಾಸನ:**

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಾಸನ ತಾಲ್ಲೂಕು ಮಹಿಳಾ ಕದಳಿ ವೇದಿಕೆ, ಭೀಮ ವಿಜಯ ಪತ್ರಿಕೆ, ಶರಣ ಸಾಹಿತ್ಯ ಪರಿಷತ್ ಹಾಗೂ ಉದಯ ವರದಿ ದಿನಪತ್ರಿಕೆಗಳ ಸಂಯುಕ್ತಾಶ್ರಯದಲ್ಲಿ ''ಕೋಮು ಸೌಹಾರ್ದತೆಗೆ ಸವಾಲುಗಳು'' ವಿಷಯದ ವಿಶೇಷ ವಿಚಾರಗೋಷ್ಠಿ, ವಚನ ವಾಚನ, ಕವಿಗೋಷ್ಠಿ ಹಾಗೂ ಸಾಹಿತಿ ವಿಶ್ವಾಸ್ ಡಿ. ಗೌಡ ಅವರ ''ವರ್ಷವಿಡಿ ಶ್ರಾವಣ'' ಕೃತಿ ಲೋಕಾರ್ಪಣೆ ಕಾರ್ಯಕ್ರಮ ನಡೆಯಿತು. ತಣ್ಣೀರುಹಳ್ಳ ಮಠದ ಮಠಾಧೀಶರಾದ ವಿಜಯಕುಮಾರ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿರಿಯ ಸಾಹಿತಿ ಹೆಚ್.ಎಲ್. ಮಲ್ಲೇಶ್ ಗೌಡ ಅವರು, ಕೋಮು ಸೌಹಾರ್ದತೆಗೆ ಎದುರಾಗುತ್ತಿರುವ ಸವಾಲುಗಳ ಮೂಲದಲ್ಲಿ ಅರೆಜ್ಞಾನ ಮತ್ತು ಮೌಢ್ಯ ಅಡಗಿವೆ



ಉದಯವಾಹಿನಿ ಚಿತ್ರ

ಎಂದು ಹೇಳಿದರು. ಇದೇ ಸಂದರ್ಭದಲ್ಲಿ ವಿಶ್ವಾಸ್ ಡಿ. ಗೌಡ ಅವರ ಹನ್ನೊಂದನೇ ಕೃತಿ ''ವರ್ಷವಿಡಿ ಶ್ರಾವಣ'' ಲೋಕಾರ್ಪಣೆಗೊಂಡಿತು.

ಕೃತಿಯನ್ನು ಪರಿಚಯಿಸಿ ಮಾತನಾಡಿದ ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಬಾ.ನಂ. ಲೋಕೇಶ್ ಅವರು, ಕನ್ನಡ ಕಥಾಸಾಹಿತ್ಯದ ಶ್ರೀಮಂತ ಪರಂಪರೆಯನ್ನು ಸ್ಮರಿಸುತ್ತಾ, ವಿಶ್ವಾಸ್ ಡಿ. ಗೌಡ ಅವರು ಸಮರ್ಥ ಕಥೆಗಾರರಾಗಿ ಗುರುತಿಸಿಕೊಂಡಿದ್ದಾರೆ ಎಂದು ಹೇಳಿದರು.

''ವರ್ಷವಿಡಿ ಶ್ರಾವಣ'' ಕೃತಿಯಲ್ಲಿರುವ ಆರು ಕಥೆಗಳು ಸಮಾಜದಲ್ಲಿನ ಶೋಷಣೆ, ದಮನ, ಅನ್ಯಾಯ ಹಾಗೂ ಮಾನವೀಯ ಸಂಕಟಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ. ಶೋಷಿತರ ನೋವಿಗೆ ಅಕ್ಷರಗಳ ಮೂಲಕ ಸ್ಪಂದಿಸಿರುವುದು ಕೃತಿಯ ವಿಶೇಷತೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಖ್ಯಾತ ಲೇಖಕ ಹಾಗೂ ಚಿಂತಕ ಸುಬ್ಬು ಹೊಲೆಯಾರ್ ಅವರು, ಶೋಷಿತ ವರ್ಗಗಳ ಬದುಕು ಮತ್ತು ಸಾಮಾಜಿಕ ನ್ಯಾಯದ ಅಗತ್ಯತೆಯ ಕುರಿತು ಮಾತನಾಡಿದರು. ಅರಕಲಗೂಡು ದೊಡ್ಡಮಠದ ಶ್ರೀ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಅವರು ಸಮಾಜದಲ್ಲಿ ಸೌಹಾರ್ದತೆ ಮತ್ತು ಮಾನವೀಯ ಮೌಲ್ಯಗಳ ಮಹತ್ವವನ್ನು ವಿವರಿಸಿದರು.

ಹಿರಿಯ ಪತ್ರಕರ್ತ ಹಾಗೂ ಭೀಮ ವಿಜಯ ಪತ್ರಿಕೆಯ ಸಂಪಾದಕ ಹೆತ್ತೂರು ನಾಗರಾಜ್ ಅವರು, ವಿಶ್ವಾಸ್ ಡಿ. ಗೌಡ ಅವರು ಹಾಸನ ಜಿಲ್ಲೆಯ ಪ್ರತಿಭಾವಂತ ಲೇಖಕ, ಕವಿ ಹಾಗೂ ಪತ್ರಕರ್ತರಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದಾರೆ ಎಂದು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಕವಿಗಳು, ಸಾಹಿತಿಗಳು ಹಾಗೂ ಸಾಹಿತ್ಯಾಸಕ್ತರು ಭಾಗವಹಿಸಿ ಕವಿಗೋಷ್ಠಿಯನ್ನು ಯಶಸ್ವಿಗೊಳಿಸಿದರು. ಮಹಿಳಾ ಕದಳಿ ವೇದಿಕೆ ಅಧ್ಯಕ್ಷೆ ಗಿರಿಜಾ ನಿರ್ವಾಣಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕುಮಾರಸ್ವಾಮಿ, ಹಿರಿಯ ವರದಿಗಾರ್ತಿ ಲೀಲಾವತಿ, ಕಟ್ಟಾಯ ಶಿವಕುಮಾರ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಮೆಕ್ಕೆಜೋಳ ಬಿಟ್ಟು ಸೋಯಾಬೀನ್ ಬೆಳೆದರೆ, ಈ ವರ್ಷ ಮಳೆಯೇ ಇಲ್ಲ!

## ಸೋಯಾಬೀನ್ ಬಿತ್ತನೆ ಮಾಡಿದ ನಂತರ ಕೆಲ ದಿನಗಳ ಕಾಲ ಸುರಿದ ಮಳೆರಾಯ ಮತ್ತೆ ಬಂದಿಲ್ಲ.

• **ಉದಯವಾಹಿನಿ ಹಾವೇರಿ:**

ಪ್ರಸ್ತುತ ವರ್ಷ ಹಾವೇರಿ ಜಿಲ್ಲೆಯ ಅನ್ನದಾತನಿಗೆ ಮುಂಗಾರು ಪೂರ್ವವೇ ಸಂಕಷ್ಟ ಶುರುವಾಗಿದೆ. ಇನ್ನು ಕೃಷಿ ಇಲಾಖೆ ರೈತರಿಗೆ ಸಮರ್ಪಕ ಬಿತ್ತನೆ ಬೀಜ ಸಮರ್ಪಕ ಗೊಬ್ಬರ ವಿತರಿಸಿಲ್ಲ ಎಂಬ ಆರೋಪ ರೈತರಿಂದ ಕೇಳಿ ಬಂದಿದೆ.

ಮತ್ತೊಂದು ಕಡೆ ಕಳೆದ ವರ್ಷ ಮೆಕ್ಕೆಜೋಳ ಬೆಳೆದು ಕೈಸುಟ್ಟುಕೊಂಡಿದ್ದ ರೈತರು ಈ ವರ್ಷ ಸೋಯಾಬೀನ್ ಬೆಳೆದರೆ, ವರುಣ ಮುನಿಸಿಕೊಂಡಿದ್ದು, ಬೆಳೆ ಒಣಗಲಾರಂಭಿಸಿದೆ. ಹಾವೇರಿ ಜಿಲ್ಲೆಯ ರೈತರು ಈ ವರ್ಷ ಸೋಯಾಬೀನ್ ಬೆಳೆಯಲು ಮುಂದಾಗಿದ್ದಾರೆ.

ಅದರಲ್ಲೂ ಹಾವೇರಿ ಹೋಬಳಿಯ ಕರ್ಜಗಿಯಲ್ಲಿ ಬಹುತೇಕ ರೈತರು ಸೋಯಾಬೀನ್ ಬೆಳೆದಿದ್ದಾರೆ. ಆದರೆ, ಸೋಯಾಬೀನ್ ಬಿತ್ತನೆ ಮಾಡಿದ ನಂತರ ಕೆಲ ದಿನಗಳ ಕಾಲ ಸುರಿದ ಮಳೆರಾಯ ಮತ್ತೆ ಇತ್ತ ಮುಖಮಾಡಿಲ್ಲ. ಪರಿಣಾಮ ಸೋಯಾಬೀನ್ ಬೆಳೆ ಒಣಗಲಾರಂಭಿಸಿದೆ. ಮಳೆಯಿಲ್ಲದೇ ಸೋಯಾಬೀನ್ ಬೆಳೆ ಒಣಗುತ್ತಿದ್ದು, ಈ ವರ್ಷ ಇಳುವರಿ ಕನಸಿನ ಮಾತು ಎನ್ನುತ್ತಿದ್ದಾರೆ ಸೋಯಾಬೀನ್ ಬೆಳೆಗಾರರು. ಕರ್ಜಗಿ ಹೋಬಳಿ ಸೇರಿದಂತೆ ಸುತ್ತಮುತ್ತ ಗ್ರಾಮಗಳಲ್ಲಿ ಸೋಯಾಬೀನ್ ಬೆಳೆದಿದ್ದಾರೆ.

**1: ಸೋಯಾಬೀನ್ ಬಿತ್ತನೆ ಮಾಡಿದೇವೆ**
**2: ಹಾವೇರಿ ರೈತರಿಗೆ ಸಂಕಷ್ಟಗಳ ಸರಮಾಲೆ**
**3: ಎಕರೆಗೆ 25 ಸಾವಿರ ರೂಪಾಯಿ ವೆಚ್ಚ**

> ಈ ವರ್ಷ ಸೋಯಾಬೀನ್ ಕಳೆದ ವರ್ಷಕ್ಕಿಂತ ಹೆಚ್ಚು ಎಕರೆ ಬಿತ್ತನೆ ಮಾಡಿದ್ದೇವೆ. ಕಳೆದ ವರ್ಷ ಮೆಕ್ಕೆಜೋಳ ಬಿತ್ತನೆ ಮಾಡಿದ್ದವು. ಮಳೆ ಅಧಿಕವಾಗಿ ಗೋವಿನಜೋಳ ಬೆಳೆ ಹಾಳಾಯಿತು. ನಂತರ ಸಿಕ್ಕ ಇಳುವರಿಗೆ ಸಹ ಸರಿಯಾದ ದರ ಸಿಗಲಿಲ್ಲ. ಗೋವಿನಜೋಳಕ್ಕೆ 12 ನೂರು ರೂಪಾಯಿಯಿಂದ 16 ನೂರು ರೂಪಾಯಿ ದರ ಸಿಕ್ಕಿತ್ತು ಎನ್ನುತ್ತಾರೆ . -ರೈತ ಹೊನ್ನಪ್ಪ.

ಸೋಯಾಬೀನ್ ಗಿಡ ಸಹ ಒಂದು ಅಡಿ ಮೇಲೆ ಬೆಳೆದು ನಿಂತಿದೆ. ಈ ರೀತಿ ಸೊಂಪಾಗಿ ಬೆಳೆದ ಸೋಯಾಬೀನ್‌ಗೆ ಕೀಡೆಗಳ ಕಾಟ ಶುರುವಾಗಿದೆ. ಕೀಡೆಗಳು ಬೆಳಗಾಗುವುದರೊಳಗೆ ಸೋಯಾಬೀನ್ ಎಲೆಗಳನ್ನು ತಿಂದು ಹಾಳು ಮಾಡುತ್ತಿವೆ. ಅದರಲ್ಲೂ ಸೋಯಾಬೀನ್ ಎಲೆಯ ಎಳಸನ್ನು ತಿನ್ನುವ ಕೀಡೆ ಸೋಯಾಬೀನ್ ಚಿಗುರದಂತೆ ಮಾಡುತ್ತಿದೆ. ಚಿಗುರು


ಉದಯವಾಹಿನಿ ಚಿತ್ರ

### ಕ್ರಿಮಿನಾಶಕಕ್ಕೆ ಸಹ ನಿಯಂತ್ರಣಕ್ಕೆ ಬರುತ್ತಿಲ್ಲ.

**ಈ ಕೀಡೆ ಕಾಟಕ್ಕೆ ಸಹ ವಿವಿಧ ಕ್ರಿಮಿನಾಶಕ ಸಿಂಪಡಣೆ ಮಾಡಿದ್ದೇವೆ. ಮೊದಲ ಸಲ ಸಿಂಪಡಣೆ ಮಾಡಿದಾಗ ಸ್ವಲ್ಪ ನಿಯಂತ್ರಣಕ್ಕೆ ಬಂದ ಕೀಡೆ ಇದೀಗ ಕ್ರಿಮಿನಾಶಕಕ್ಕೆ ಸಹ ನಿಯಂತ್ರಣಕ್ಕೆ ಬರುತ್ತಿಲ್ಲ. ಇದಕ್ಕೆ ಸರಿಯಾದ ಮಳೆಯಾಗಬೇಕು. ಉತ್ತಮ ಮಳೆಯಾಗುತ್ತೆ ಎಂದು ಜಮೀನಿನಲ್ಲಿ ಕಳೆ ಸಹ ತೆಗೆದಿದ್ದೇವೆ. ಈಗ ಈ ರೀತಿಯಾದರೆ ನಾವು ಏನು ಮಾಡಬೇಕು ಎನ್ನುವುದು ರೈತರ ಅಳಲು.**

> ಕಳೆದ ವರ್ಷ ಮಳೆ ಅಧಿಕವಾಗಿ ಗೋವಿನಜೋಳ ಹಾಳಾಗಿತ್ತು. ಆದರೆ, ಮಳೆ ಹೆಚ್ಚಾದರೂ ಸೋಯಾಬೀನ್ ತಡೆಯುತ್ತದೆ ಎಂದು ಈ ಬಾರಿ ಪ್ರತಿಶತ 70 ರಷ್ಟು ರೈತರು ಸೋಯಾಬೀನ್ ಬಿತ್ತನೆ ಮಾಡಿದ್ದವು ಎನ್ನುತ್ತಾರೆ. -ಬಸವರಾಜ್.

ತಿಂದ ಮೇಲೆ ಉಳಿದ ಎಲೆಗಳನ್ನು ತಿನ್ನುವ ಕೀಡೆ ಗಿಡ ಹಾಳುಮಾಡುತ್ತದೆ. ಇದಕ್ಕೆ ಕ್ರಿಮಿನಾಶಕ ಸಿಂಪಡಣೆ ಮಾಡಿದರೆ ಸ್ವಲ್ಪಮಟ್ಟಿನ ನಿಯಂತ್ರಣಕ್ಕೆ ಬರುತ್ತದೆ. ಸಂಪೂರ್ಣ ನಿಯಂತ್ರಣವಾಗುವುದಿಲ್ಲ. ಆದರೆ, ಉತ್ತಮ ಮಳೆಯಾದರೆ ಈ ಕೀಡೆ ಸಾಯುತ್ತದೆ ಎನ್ನುತ್ತಾರೆ ರೈತರು. ಒಂದು ಎಕರೆ ಸೋಯಾಬೀನ್ ಬೆಳೆಯಲು 25 ಸಾವಿರ ರೂಪಾಯಿ ವೆಚ್ಚ ಮಾಡಲಾಗಿದೆ. ಜಮೀನು ಹದಮಾಡಿ ನಂತರ ತೇವಾಂಶ ನೋಡಿ ಬಿತ್ತನೆ ಬೀಜ ಬಿತ್ತಬೇಕು. ನಂತರ ಅದಕ್ಕೆ ಸಮರ್ಪಕ ಗೊಬ್ಬರ ಹಾಕಬೇಕು. ಪ್ರಸ್ತುತ ವರ್ಷ ಸೋಯಾಬೀನ್ ಬಿತ್ತನೆ ಬೀಜಕ್ಕೆ ದಿನಗಟ್ಟಲೇ ಸರತಿಯಲ್ಲಿ ನಿಂತು ಬಿತ್ತನೆ ಬೀಜ ಪಡೆದಿದ್ದೇವೆ. ಅದಕ್ಕೆ ಯೂರಿಯಾ ಸೇರಿದಂತೆ ವಿವಿಧ ಗೊಬ್ಬರ ಹಾಕಲು ಎಕರೆಗೆ ಒಂದು ಚೀಲ ಮಾತ್ರ ನೀಡಿದ್ದಾರೆ. ಆದರೂ ಕಷ್ಟಪಟ್ಟು ಸೋಯಾಬೀನ್ ಬೆಳೆದಿದ್ದೇವೆ. ಈಗ ಕೀಡೆ ಕಾಟ ಶುರುವಾಗಿದೆ.

# ಪಂಚ ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಮಾತ್ರ ಸಿಗುವಂತಾಗಲಿ

• **ಉದಯವಾಹಿನಿ ಬೀದರ್,**

ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆಗಳು ಮುಂದುವರೆಸಲಾಗುವುದು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರಾಜ್ಯಾಧ್ಯಕ್ಷ ಹೆಚ್. ಎಂ ರೇವಣ್ಣ ಹೇಳಿದರು.ಅವರು ನಗರದ ಹಬ್ಸಿ ಕೋಟ್ ಗೆಸ್ಟ್ ಹೌಸ್ ನಲ್ಲಿ ಕರೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದರು.


ಉದಯವಾಹಿನಿ ಚಿತ್ರ

ರಾಜ್ಯದ ಜನರು ಭಯ ಪಡಬೇಕಿಲ್ಲ ಗ್ಯಾರಂಟಿ ಯೋಜನೆಗಳು ನಿಲ್ಲಿವುದಿಲ್ಲ. 8-09-2025 ರಲ್ಲಿ ಮುಖ್ಯ ಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮರಣ ಹೊಂದಿದ ಫಲಾನುಭವಿಗಳ ಬಗ್ಗೆ ಸಿಎಂ ರವರು ಪ್ರಸ್ತಾಪಿಸಿದರು. ತದನಂತರ ನಾವು ರಾಜ್ಯದ 26 ಜಿಲ್ಲೆಗಳಲ್ಲಿ ಗ್ಯಾರಂಟಿ ಅನುಷ್ಠಾನದ ಮಾಹಿತಿ ಕಲೆಹಾಕಲು ಪ್ರವಾಸ ಮಾಡಿದ ಸಂದರ್ಭದಲ್ಲಿ ಕೆಲವು ಮೃತ ಫಲಾನುಭವಿಗಳ ಖಾತೆಗೆ ಗೃಹಲಕ್ಷ್ಮೀ ಹಣ ಜಮೆಯಾಗಿರುವುದು ಬೆಳಕಿಗೆ ಬಂದಿದೆ. ಆದ್ದರಿಂದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಇಂತಹ ಪ್ರಕರಣಗಳನ್ನು ಪರಿಶೀಲನೆ ಮಾಡುವಂತೆ ಸೂಚನೆ ನೀಡಲಾಗಿತ್ತು. ಅಧಿಕಾರಿಗಳು ಪರಿಶೀಲನೆ ಮಾಡಿದ್ದಾಗ ರಾಜ್ಯದಲ್ಲಿ 114 ಕ್ಕೂ ಹೆಚ್ಚು ಕೋಟಿ ಮೃತ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗಿದ್ದು, ತಿಳಿದುಬಂದಿದೆ ಅದರಂತೆ ಜಿಲ್ಲೆಯಲ್ಲಿ 11.99 ಕೋಟಿ ರೂಪಾಯಿ ಜಮೆಯಾಗಿದೆ.

ಈಗಾಗಲೇ ರಾಜ್ಯದಲ್ಲಿ ಫಲಾನುಭವಿಗಳ ಖಾತೆಗೆ ಜಮೆಯಾದ 14 ಕೋಟಿ ಹಾಗೂ ಜಿಲ್ಲೆಯಲ್ಲಿ 11.7 ಲಕ್ಷ ರೂಪಾಯಿ ಹಿಂಪಡೆಯಲಾಗಿದ್ದು, ಇನ್ನು ಹಿಂಪಡೆಯುವ ಕಾರ್ಯ ಮುಂದುವರೆದಿದೆ. ಈ ಹಿನ್ನೆಲೆಯಲ್ಲಿ ಯೋಜನೆಗಳನ್ನು ಪರಿಷ್ಕರಣೆ ಮಾಡುವ ಕಾರ್ಯವನ್ನು ಕೈಗೆತ್ತಿ ಕೊಳ್ಳಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅಮೃತರಾವ್ ಚಿಮಕೋಡೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಶ್ರೀಧರ, ಮಾಳಪ್ಪ ಅಡಸಾರೆ, ಮಲ್ಲಿಕಾರ್ಜುನ ಬಿರಾದಾರ, ದತ್ತು ಮೂಲಗೆ, ಮುರಳೀಧರರಾವ್ ಏಕಲಾರಕರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಂತಾರಾಷ್ಟ್ರೀಯ ಯೋಗ ದಿನಾಚರಣೆ

• **ಉದಯವಾಹಿನಿ ಸುಳ್ಯ:**


ಉದಯವಾಹಿನಿ ಚಿತ್ರ

ಜೂನ್ 21 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಕೊಡಿಯಾಲ ಉನ್ನತೀಕರಿಸಿದ ಶಾಲೆಯಲ್ಲಿ ಜೂನ್ 22 ರಂದು ಸೋಮವಾರ ಯೋಗಾಸನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸ್ಥಳಿಯ ಆರೋಗ್ಯ ಕೇಂದ್ರದ ಸಿಬ್ಬಂದಿಗಳು, ಹಾಗೂ ಕೊಡಿಯಾಲ ಗ್ರಂಥಾಲಯ ಸಿಬ್ಬಂದಿಗಳು ಕೊಡಿಯಾಲ ಶಾಲೆಯ ವಿದ್ಯಾರ್ಥಿಗಳ ಜೊತೆಗೆ ಯೋಗಾಸನ ಮಾಡಿ ಅದರ ಸದಪಯೋಗವನ್ನು ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದ, ಅಂಗನವಾಡಿ ಪುಟಾಣಿಗಳು, ಕಾರ್ಯಕರ್ತರು, ಅಕ್ಷರ ದಾಸೋಹ ಸಿಬ್ಬಂದಿಗಳು ಉಪಸ್ಥಿತರಿದ್ದು ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

# ರಾಷ್ಟ್ರಮಟ್ಟದ ಸ್ಕೇಟಿಂಗ್: ಮುದ್ದೇಬಿಹಾಳದ 'ಏಕಲವ್ಯ ಅಕಾಡೆಮಿ' ಸಾಧನೆ, ರಾಜ್ಯಕ್ಕೆ 3ನೇ ಸ್ಥಾನ

• **ಉದಯವಾಹಿನಿ ಮುದ್ದೇಬಿಹಾಳ:**

ಮಹಾರಾಷ್ಟ್ರದ ಸೋಲಾಪುರದಲ್ಲಿ ನಡೆದ 8ನೇ ರಾಷ್ಟ್ರಮಟ್ಟದ ರೋಲರ್ ಸ್ಕೇಟಿಂಗ್ ಪಂದ್ಯಾವಳಿಯಲ್ಲಿ ಮುದ್ದೇಬಿಹಾಳದ 'ಏಕಲವ್ಯ ರೋಲರ್ಸ್ ಸ್ಕೇಟಿಂಗ್ ಅಕಾಡೆಮಿ'ಯ ಕ್ರೀಡಾಪಟುಗಳು ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಗೆದ್ದು, ರಾಜ್ಯಕ್ಕೆ ಒಟ್ಟಾರೆ ತೃತೀಯ ಸ್ಥಾನ ತಂದುಕೊಟ್ಟಿದ್ದಾರೆ.

ಅಕಾಡೆಮಿಯ ಸಂಸ್ಥಾಪಕ ಶಿವಕುಮಾರ ಶಾರದಳ್ಳಿ ಮಾಹಿತಿ ನೀಡಿ, ನಮ್ಮ ತಾಲ್ಲೂಕಿನಿಂದ ಪಾಲ್ಗೊಂಡಿದ್ದ ಎಲ್ಲಾ 12 ವಿದ್ಯಾರ್ಥಿಗಳು ವೈಯಕ್ತಿಕ ಪದಕಗಳೊಂದಿಗೆ ಅತಿ ಹೆಚ್ಚು ಅಂಕ ಗಳಿಸಿ, ತಾಲೂಕಿನ ಕೀರ್ತಿ ಹೆಚ್ಚಿಸಿದ್ದಾರೆ ಎಂದು ತಿಳಿಸಿದರು. ವಿಜೇತ ಮಕ್ಕಳಿಗೆ ಫೆಡರೇಷನ್‌ನ ರಾಷ್ಟ್ರೀಯ ಹಾಗೂ ರಾಜ್ಯ ಪದಾಧಿಕಾರಿಗಳು ಪದಕ ಮತ್ತು ಟ್ರೋಫಿ ವಿತರಿಸಿ ಅಭಿನಂದಿಸಿದರು.



ಉದಯವಾಹಿನಿ ಚಿತ್ರ

**ವಿಕ್ರಾಂತ್ ಶಾರದಳ್ಳಿ:** 10 ವರ್ಷದೊಳಗಿನ ಇನ್‌ಲೈನ್ ವಿಭಾಗದಲ್ಲಿ ಚಿನ್ನ
**ಶಾಹೀದಾ ಅಕ್ಕಲಕೋಟ:** 10 ವರ್ಷದೊಳಗಿನ ರಿಕ್ರಿಯೇಷನ್ ವಿಭಾಗದಲ್ಲಿ ಚಿನ್ನ
**ಮಹ್ಮದಾಹೀಲ್ ಅಕ್ಕಲಕೋಟ:** 12 ವರ್ಷದೊಳಗಿನ ರಿಕ್ರಿಯೇಷನ್ ವಿಭಾಗದಲ್ಲಿ ಚಿನ್ನ
**ವೈಭವ್ ಬಿರಾದಾರ್:** 10 ವರ್ಷದೊಳಗಿನ ಇನ್‌ಲೈನ್ ವಿಭಾಗದಲ್ಲಿ ಬೆಳ್ಳಿ
**ಶಕುಂತಲಾ ಶಾರದಳ್ಳಿ:** 15 ವರ್ಷದೊಳಗಿನ ಇನ್‌ಲೈನ್ ವಿಭಾಗದಲ್ಲಿ ಬೆಳ್ಳಿ
**ಹೃದಯಾನಂದ ಕೊಪ್ಪ:** 15 ವರ್ಷದೊಳಗಿನ ಕ್ವಾಡ್ ವಿಭಾಗದಲ್ಲಿ ಬೆಳ್ಳಿ ಮತ್ತು ಕಂಚು
**ನಾಗಶೃತನ ಇಲ್ಲೂರ:** 12 ವರ್ಷದೊಳಗಿನ ರಿಕ್ರಿಯೇಷನ್ ವಿಭಾಗದಲ್ಲಿ ಬೆಳ್ಳಿ
**ಅಕೀಲ್ ಅಸ್ಕಿ:** 12 ವರ್ಷದೊಳಗಿನ ಇನ್‌ಲೈನ್ ವಿಭಾಗದಲ್ಲಿ ಕಂಚು
**ಯುಸುಫ್ ಚಿಮ್ಮಲಗಿ:** 10 ವರ್ಷದೊಳಗಿನ ರಿಕ್ರಿಯೇಷನ್ ವಿಭಾಗದಲ್ಲಿ ಕಂಚು
**ಅಭಯ್ ದೇವಾಡಗಿ:** 12 ವರ್ಷದೊಳಗಿನ ರಿಕ್ರಿಯೇಷನ್ ವಿಭಾಗದಲ್ಲಿ ಕಂಚು

ಮಕ್ಕಳ ಸಾಧನೆಗೆ ಪಾಲಕರಾದ ನಂದು ಅಸ್ಕಿ, ರಾಜೋಟಿ ಬಳಿಗಾರ್, ಮಹ್ಮದಶಫೀಕ್ ಅಕ್ಕಲಕೋಟ, ಉಮಾಕಾಂತ್ ರುದ್ರವಾರ್, ಮೊಸೀನ್ ಚಿಮ್ಮಲಗಿ ಪ್ರೋತ್ಸಾಹಿಸಿದ್ದಾರೆ. ಕ್ರೀಡಾಪಟುಗಳ ಸಾಧನೆಗೆ ತಾಲ್ಲೂಕಿನಾದ್ಯಂತ ಶ್ಲಾಘನೆ ವ್ಯಕ್ತವಾಗಿದೆ.

# 7.51 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು

• **ಉದಯವಾಹಿನಿ ಕಲಬುರಗಿ**

ಮನೆ ಬೀಗ ಮುರಿದು 7, 51, 400 ರೂ.ಮೌಲ್ಯದ ನಗನಾಣ್ಯ ಕಳವು ಮಾಡಿರುವ ಘಟನೆ ಚೌಕ್ ಪೊಲೀಸ್ ಠಾಣೆ ವ್ಯಾಪ್ತಿಯ ಸಿದ್ಧರಾಮೇಶ್ವರ ಕಾಲೋನಿಯಲ್ಲಿ ನಡೆದಿದೆ. ಪ್ರೌಢಶಾಲಾ ಶಿಕ್ಷಕರಾದ ಸಿದ್ಧಾರೂಢ ಬೆಳಮಗಿ ಎಂಬುವವರ ಮನೆ ಬೀಗ ಮುರಿದು ಕಳ್ಳರು ಚಿನ್ನ, ಬೆಳ್ಳಿ ಮತ್ತು ನಗದು ದೋಚಿಕೊಂಡು ಹೋಗಿದ್ದಾರೆ.

ಮಗಳ ಮದುವೆ ಕಾರ್ಯಕ್ರಮ ಇದ್ದ ಪ್ರಯುಕ್ತ ಮನೆಗೆ ಬೀಗ ಹಾಕಿಕೊಂಡು ಕಲ್ಯಾಣ ಮಂಟಪಕ್ಕೆ ಹೋಗಿದ್ದು, ಈ ವೇಳೆ ಕಳ್ಳರು ಮನೆ ಬೀಗ ಮುರಿದು ಚಿನ್ನ, ಬೆಳ್ಳಿ ಮತ್ತು ನಗದು ಹಣ ಕಳವು ಮಾಡಿದ್ದಾರೆ ಎಂದು ತಿಳಿದುಬಂದಿದೆ. ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ವಿದ್ಯುತ್ ಖಾಸಗೀಕರಣ ಕೈಬಿಡಲು ರೈತ ಸಂಘ ಆಗ್ರಹ

• **ಉದಯವಾಹಿನಿ ಹೊಸಪೇಟೆ.**

ರಾಜ್ಯ ಸರ್ಕಾರ ವಿದ್ಯುತ್ ಖಾಸಗೀಕರಣ ಮಾಡುವುದನ್ನು ಕೂಡಲೇ ಕೈಬಿಡುವಂತೆ ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯಿಸಿದೆ. ಈ ಕುರಿತು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಜೆ.ಎಂ.ವೀರಸಂಗಯ್ಯ ನೇತೃತ್ವದ ರೈತ ನಿಯೋಗ ಬೆಂಗಳೂರಿನ ವಸಂತ ನಗರದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಗಳನ್ನು ಭೇಟಿ ಮಾಡಿ ಯಾವುದೇ ಕಾರಣಕ್ಕೂ ರಾಜ್ಯದ ವಿದ್ಯುಚ್ಛಕ್ತಿ ನಿಯಂತ್ರಣವನ್ನು ಟಾಟಾ ಪವರ್ ಕಂಪನಿಗೆ ನೀಡಬಾರದು ಎಂದು ಒತ್ತಾಯಿಸಿ ಮನವಿಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜೆ.ಎಂ.ವೀರಸಂಗಯ್ಯ, ರಾಜ್ಯದ ವಿದ್ಯುತ್ ಖಾಸಗೀಕರಣ ವಿರೋಧಿಸಿ, ಈವರೆಗೆ 15 ಲಕ್ಷ ಅರ್ಜಿಗಳು ಆಕ್ಷೇಪಣೆ ಸಲ್ಲಿಕೆಯಾಗಿವೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇದೊಂದು ಸೇವಾ ವಲಯವಾಗಿರುವುದರಿಂದ ರಾಜ್ಯದ ವಿದ್ಯುತ್ ನ್ನು ಯಾವುದೇ ಕಾರಣಕ್ಕೆ ಖಾಸಗೀಖರಣ ಮಾಡಬಾರದು ಎಂದು ಸರ್ಕಾರವನ್ನು ಒತ್ತಾಯಿಸಿದರು.

ರೈತರ ಆಕ್ಷೇಪಣೆಗಳನ್ನು ಪರಿಗಣಿಸಿ, ಸರ್ಕಾರ ವಿದ್ಯುತ್ ಖಾಸಗೀಕರಣದಿಂದ ಹಿಂದಕ್ಕೆ ಸರಿಯದಿದ್ದರೆ, ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ರಾಜ್ಯ ರೈತ ಸಂಘದಿಂದ ದೊಡ್ಡ ಮಟ್ಟದ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಕೆ.ದುರುಗೇಶ್, ಶ್ರೀನಾಥ ಜಿ., ಶಿವಪುತ್ರಪ್ಪ ಸೇರಿದಂತೆ ಮತ್ತಿತರರು ಇದ್ದರು.

# ನೈಸರ್ಗಿಕ ಕೃಷಿ ಕುರಿತು ಒಂದು ದಿನದ ಕಾರ್ಯಾಗಾರ

• **ಉದಯವಾಹಿನಿ ಬೀದರ್,:**

ಕೃಷಿ ವಿಜ್ಞಾನ ಕೇಂದ್ರ, ಬೀದರ್ಮತ್ತು ಬಿಜೆಪಿ ಜಿಲ್ಲಾ ರೈತ ಮೋರ್ಚ ಸಹಭಾಗಿತ್ವದಲ್ಲಿ ''ನೈಸರ್ಗಿಕ ಕೃಷಿ'' ಕುರಿತು ಒಂದು ದಿನದ ಕಾರ್ಯಾಗಾರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸುಮಾರು 170 ರೈತರು, ರೈತಮಹಿಳೆಯರು ಹಾಗೂ ಗ್ರಾಮೀಣ ಯುವಕರು ಭಾಗವಹಿಸಿ ನೈಸರ್ಗಿಕಕೃಷಿಯ ವಿವಿಧ ಅಂಶಗಳ ಕುರಿತು ಮಾಹಿತಿ ಪಡೆದರು. ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದಡಾ.ರಾಜಶೇಖರ ಬಸನಾಯಕ, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನಕೇಂದ್ರ, ಬೀದರವರು ಕೃಷಿ ವಿಜ್ಞಾನಕೇಂದ್ರದ ಉದ್ದೇಶಗಳು, ''ಖೇತ್ ಬಚಾವೋ ಅಭಿಯಾನ''ದ ಮಹತ್ವ ಹಾಗೂ ನೈಸರ್ಗಿಕ ಮತ್ತು ಸಾವಯವಕೃಷಿಯಅವಶ್ಯಕತೆಯ ಕುರಿತು ವಿವರಿಸಿದರು.ಅಲ್ಲದೆ, ನೈಸರ್ಗಿಕಕೃಷಿಯಲ್ಲಿ ಬಳಸ ಬಹುದಾದ ವಿವಿಧ ಕೃಷಿ ಪರಿಕರಗಳ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಿ ರೈತರಿಗೆ ಉಪಯುಕ್ತ ಮಾಹಿತಿಯನ್ನು ನೀಡಿದರು.

ಕಾರ್ಯಾಗಾರವನ್ನು ಉದ್ಘಾಟಿಸಿದ ಶ್ರೀ ಶಿವರಾಜ ಅಲಮಾಜೆ, ಜಿಲ್ಲಾರೈತ ಮೋರ್ಚಾಅಧ್ಯಕ್ಷರು, ರೈತರು ಪರಿಸರ ಸ್ನೇಹಿ ಹಾಗೂ ಆರೋಗ್ಯಕರ ಆಹಾರ ಉತ್ಪಾದನೆಗಾಗಿ ನೈಸರ್ಗಿಕಕೃಷಿಯನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಶ್ರೀ ಹಣಮಂತರಾವ ಪಾಟೀಲ, ಸಾವಯವ ಕೃಷಿಕರು, ನೈಸರ್ಗಿಕ ಹಾಗೂ ಸಾವಯವ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರಿಂದ ಉತ್ಪಾದನಾ ವೆಚ್ಚ ಜೊತೆಗೆ ಮಣ್ಣಿನ ಆರೋಗ್ಯವೂ ಸುಧಾರಿಸುತ್ತದೆಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

ಶ್ರೀ ಸತೀಶ್ ನನ್ನೂರೆ, ತಾಲ್ಲೂಕು ಅಧ್ಯಕ್ಷರು, ನೈಸರ್ಗಿಕ ಕೃಷಿಯಿಂದ ಮಣ್ಣಿನ ಫಲವತ್ತತೆ ಹೆಚ್ಚುವುದರೊಂದಿಗೆ ಪರಿಸರ ಸಂರಕ್ಷಣೆಗೆ ಸಹಕಾರಿಯಾಗುತ್ತದೆಎಂದು ಹೇಳಿದರು. ಪ್ರಗತಿ ಪರರೈತರಾದ ಶ್ರೀ ಗುರುಲಿಂಗಪ್ಪ ಮೇಲದೊಡ್ಡಿ ಅವರು ತಮ್ಮ ನೈಸರ್ಗಿಕ ಹಾಗೂ ಸಾವಯವಕೃಷಿಯ ಅನುಭವಗಳನ್ನು ಹಂಚಿಕೊಂಡುರೈತರಿಗೆ ಪ್ರೇರಣೆ ನೀಡಿದರು. ಕಾರ್ಯಾಗಾರದ ಸಂದರ್ಭದಲ್ಲಿ ಪ್ರಧಾನಮಂತ್ರಿಕಿಸಾನ್ ಸಮ್ಮಾನ್ ನಿಧಿ ಯೋಜನೆಯ 23ನೇ ಕಂತಿನ ನೇರ ಪ್ರಸಾರವನ್ನು ವೀಕ್ಷಿಸಲಾಯಿತು.ದೇಶದರೈತರ ಖಾತೆಗಳಿಗೆ ನೆರವುಧನ ವರ್ಗಾವಣೆಯಕಾರ್ಯಕ್ರಮವನ್ನು ರೈತರು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು.

# ಎನ್ ಎಸ್ ಎಸ್ ಶಿಬಿರ ನಾಯಕತ್ವ ಗುಣ ರೂಪಿಸುತ್ತದೆ: ಅಟ್ಟೂರ



• **ಉದಯವಾಹಿನಿ ಕಲಬುರಗಿ:**

ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ, ನಾಯಕತ್ವ ಗುಣ, ಶಿಸ್ತು ಮತ್ತು ಸೇವಾ ಮನೋಭಾವವನ್ನು ಬೆಳೆಸುವುದೆ ರಾಷ್ಟ್ರೀಯ ಸೇವಾ ಯೋಜನೆ ಉದ್ದೇಶವಾಗಿದೆ ಎಂದು ಜನಪರ ಹೋರಾಟಗಾರ, ನ್ಯಾಯವಾದಿ ಹಣಮಂತರಾಯ ಅಟ್ಟೂರ ಹೇಳಿದರು. ಶ್ರೀ ಹಿಂಗೂಲಾಂಬಿಕ ಶಿಕ್ಷಣ ಸಂಸ್ಥೆ ಹಾಗೂ ಗುಲ್ಬರ್ಗ ವಿಶ್ವವಿದ್ಯಾಲಯ ಸಂಯುಕ್ತ ಆಶ್ರಯದಲ್ಲಿ ಶ್ರೀ ಹಿಂಗುಲಾಂಬಿಕಾ ಕಾಲೇಜಿನ ಆವರಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಕರ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡುತ್ತ ಗ್ರಾಮೀಣ ಅಭಿವೃದ್ಧಿ, ಸ್ವಚ್ಛತೆ, ಪರಿಸರ ಸಂರಕ್ಷಣೆ, ರಕ್ತದಾನ, ಆರೋಗ್ಯ ಜಾಗೃತಿ ಹಾಗೂ ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡುತ್ತಾರೆ.

ವಿದ್ಯಾರ್ಥಿಗಳಿಗೆ ಸಮಾಜದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಅವುಗಳ ಪರಿಹಾರಕ್ಕಾಗಿ ಕಾರ್ಯನಿರ್ವಹಿಸಲು ಅವಕಾಶ ಒದಗಿಸುತ್ತದೆ.ನಾಯಕತ್ವದ ಗುಣ ಬೆಳೆಸುವರೊಂದಿಗೆ ಸಮೃದ್ಧ ರಾಷ್ಟ್ರ ಕಟ್ಟಬಹುದು ಎಂದು ಮಾರ್ಮಿಕವಾಗಿ ನುಡಿದರು. ಮುಖ್ಯ ಅಥಿತಿಗಳಾಗಿ ಎಮ್ ಜೆ ಪಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ನೀಲಕಂಠ ಕಣ್ಣಿ, ಜೇವರ್ಗಿ ಸರಕಾರಿ ಪದವಿ ಕಾಲೇಜಿ ಸಹ ಪ್ರಾಧ್ಯಪಕರಾದ ಡಾ. ಶರಣಪ್ಪ ಗುಂಡಗುರ್ತಿ, ಶಿಕ್ಷಣ ಪ್ರೇಮಿ ಮಾಲಕಾರಿ ಪೂಜಾರಿ,ಶಿಭಿ ರಾರ್ಥಿಗಳು ಸೇರಿದಂತೆ ಅನೇಕ ಜನ ಭಾಗವಹಿಸಿದರು.

# 30 ವರ್ಷಗಳ ಬಳಿಕ ಮೊದಲ ಬಾರಿಗೆ ಬರಿದಾದ ಭದ್ರೆಯ ಒಡಲು

• **ಉದಯವಾಹಿನಿ ಚಿಕ್ಕಮಗಳೂರು:**

ಕಾಫಿನಾಡು ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಬಾರಿ ಮುಂಗಾರು ಮಳೆಯ ಕೊರತೆ ಪ್ರಕೃತಿಯ ಮೇಲೆಯೇ ಗಂಭೀರ ಪರಿಣಾಮ ಬೀರಿದ್ದು, ಮೂರು ದಶಕಗಳ ಬಳಿಕ ಮೊದಲ ಬಾರಿಗೆ ಭದ್ರಾ ನದಿ ಬತ್ತುವ ಹಂತಕ್ಕೆ ತಲುಪಿರುವುದು ಜನರಲ್ಲಿ ಆತಂಕ ಮೂಡಿಸಿದೆ. ಸಾಮಾನ್ಯವಾಗಿ ಜೂನ್ ತಿಂಗಳ

**1 : 30 ವರ್ಷಗಳ ಬಳಿಕ ಮೊದಲ ಬಾರಿಗೆ**
**2 : ಬಂಡೆಗಳು ಮತ್ತು ಬೃಹತ್ ಕಲ್ಲುಗಳು**
**3 : ಬಾರಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆ**

ವೇಳೆಗೆ ಉಕ್ಕಿ ಹರಿದು ಪ್ರವಾಹದ ಭೀತಿ ಸೃಷ್ಟಿಸುತ್ತಿದ್ದ ಭದ್ರಾ ನದಿ, ಇದೀಗ ನೀರಿಲ್ಲದೇ ಬರಿದಾದ ದೃಶ್ಯವೇ ಕಾಣುತ್ತಿದೆ. ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕಿನ ಕುದುರೆಮುಖ ಪರ್ವತ ಶ್ರೇಣಿಯಲ್ಲಿ ಹುಟ್ಟಿ ಕಳಸ ಹಾಗೂ ಎನ್.ಆರ್.ಪುರ ತಾಲ್ಲೂಕುಗಳ ಮೂಲಕ ಹರಿಯುವ ಭದ್ರಾ ನದಿ, ಮಲೆನಾಡಿನ ಪ್ರಮುಖ ಜೀವನಾಡಿಗಳಲ್ಲಿ ಒಂದಾಗಿದೆ. ಆದರೆ, ಈ ಬಾರಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಸುರಿಯದ ಹಿನ್ನೆಲೆಯಲ್ಲಿ ನದಿಯ ನೀರಿನ ಮಟ್ಟ ತೀವ್ರವಾಗಿ ಕುಸಿದಿದೆ.ಪರಿಣಾಮವಾಗಿ ಬಾಳೆಹೊನ್ನೂರು ಸಮೀಪದ ಸೇತುವೆ ಬಳಿ ನದಿಯ ಒಡಲು ಸಂಪೂರ್ಣವಾಗಿ ಕಾಣುವಂತಾಗಿದ್ದು,

## ನದಿಯ ಒಡಲು ಸಂಪೂರ್ಣವಾಗಿ ಕಾಣುವಂತಾಗಿದೆ.



**ಕಲ್ಲು ಬಂಡೆಗಳು ಸಂಪೂರ್ಣವಾಗಿ ಗೋಚರಿಸುತ್ತಿವೆ.**

ಕಳೆದ 30 ವರ್ಷಗಳಲ್ಲಿ ಕಾಣದ ದೃಶ್ಯಕ್ಕೆ ಜನ ಸಾಕ್ಷಿಯಾಗಿದ್ದಾರೆ. ಇಲ್ಲಿಯವರೆಗೆ ನದಿಯ ಆಳವನ್ನು ಊಹಿಸಲೂ ಸಾಧ್ಯವಾಗದಿದ್ದ ಪ್ರದೇಶಗಳಲ್ಲಿ ಇದೀಗ ಕಲ್ಲು - ಬಂಡೆಗಳು ಸಂಪೂರ್ಣವಾಗಿ ಗೋಚರಿಸುತ್ತಿವೆ. ಸಾಮಾನ್ಯವಾಗಿ ನೀರಿನಿಂದ ತುಂಬಿ ಹರಿಯುತ್ತಿದ್ದ ಸ್ಥಳದಲ್ಲಿ ಸ್ಥಳೀಯ ಯುವಕರು ವಾಲಿಬಾಲ್ ಹಾಗೂ ಕ್ರಿಕೆಟ್ ಆಡುತ್ತಿರುವ ದೃಶ್ಯಗಳು ಗಮನ ಸೆಳೆಯುತ್ತಿವೆ.

ನದಿಗೆ ಕಾಲಿಡಲು ಸಹ ಭಯಪಡುತ್ತಿದ್ದ ಜಾಗದಲ್ಲಿ ಈಗ ಕ್ರೀಡಾ ಚಟುವಟಿಕೆಗಳು ನಡೆಯುತ್ತಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಪ್ರತಿಬಿಂಬಿಸುತ್ತಿದೆ.

> ಈ ವೇಳೆ, ಕೆಲವೊಂದು ಜಾಗಗಳಿಗೆ ಹೋಗಲು ನಾವು ಭಯಪಡುವ ಪರಿಸ್ಥಿತಿ ಇತ್ತು. ಆದರೆ, ಈಗ ನೀರಿಲ್ಲದ ಕಾರಣ ಸರಾಗವಾಗಿ ಆ ಸ್ಥಳಗಳಿಗೆ ಸಾಗಬಹುದಾಗಿದೆ ಇದು ನಮಗೆ ಅಚ್ಚರಿ ಉಂಟು ಮಾಡಿದ್ದು ನಿಜಕ್ಕೂ ಈ ದೃಶ್ಯ ತುಂಬಾ ವರ್ಷಗಳ ನಂತರ ನಾವು ಇಲ್ಲಿ ಕಾಣುವಂತಾಗಿದೆ ಎಂದು ಹೇಳಿದರು.
> –ನಾಗರಾಜ್ ಭಟ್

ಸ್ಥಳೀಯ ನಾಗರಾಜ್ ಭಟ್ ಪ್ರತಿಕ್ರಿಯಿಸಿ, ಕಳೆದ ಮೂರು ದಶಕಗಳಲ್ಲಿ ಇಂತಹ ಪರಿಸ್ಥಿತಿಯನ್ನು ಅವರು ಕಂಡಿಲ್ಲ. ಜೂನ್

### ಸಂಪೂರ್ಣ ಬತ್ತುವ ಭೀತಿ

ಈ ಪರಿಸ್ಥಿತಿ ಕೇವಲ ದೃಶ್ಯ ವೈಪರೀತ್ಯವಾಗಿರದೇ, ಮುಂದಿನ ದಿನಗಳಲ್ಲಿ ಕುಡಿಯುವ ನೀರು, ಕೃಷಿ ಚಟುವಟಿಕೆಗಳು ಹಾಗೂ ಜಲಚರ ಜೀವಿಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಪರಿಸರ ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ಮಳೆ ಪ್ರಮಾಣ ಇದೇ ರೀತಿ ಕಡಿಮೆಯಾಗಿದ್ದರೆ ನದಿಯ ನೀರು ಇನ್ನಷ್ಟು ಕುಸಿದು ಸಂಪೂರ್ಣ ಬತ್ತುವ ಭೀತಿಯೂ ಎದುರಾಗಿದೆ.

ತಿಂಗಳ ಆರಂಭದಲ್ಲೇ ಭದ್ರಾ ನದಿ ತುಂಬಿ ಹರಿಯುತ್ತಿದ್ದರೆ, ಈ ಬಾರಿ ಮಳೆಯ ಕೊರತೆಯಿಂದ ನದಿ ಬರಿದಾಗಿರುವುದು ಅಚ್ಚರಿ ಮೂಡಿಸಿದೆ. ನದಿಯ ಕೆಳ ಭಾಗದಲ್ಲಿರುವ ಬಂಡೆಗಳು ಮತ್ತು ಬೃಹತ್ ಕಲ್ಲುಗಳು ಸಂಪೂರ್ಣವಾಗಿ ಕಾಣುತ್ತಿರುವುದು ಪರಿಸರದಲ್ಲಾಗಿರುವ ಬದಲಾವಣೆಯ ಸ್ಪಷ್ಟ ಸೂಚನೆಯಾಗಿದೆ. ಒಟ್ಟಾರೆ, ಮಲೆನಾಡಿನ ಜೀವನಾಡಿ ಯಾಗಿರುವ ಭದ್ರಾ ನದಿಯ ಈ ಸ್ಥಿತಿ ಸ್ಥಳೀಯರಲ್ಲಿ ಅಚ್ಚರಿ, ಆಶ್ಚರ್ಯ ಹಾಗೂ ಆತಂಕವನ್ನು ಒಂದೇ ಸಮಯದಲ್ಲಿ ಮೂಡಿಸಿದೆ. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗದಿದ್ದರೆ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುವ ಸಾಧ್ಯತೆ ಇದ್ದು, ರೈತರು ಹಾಗೂ ಸಾರ್ವಜನಿಕರು ಆಕಾಶದತ್ತ ಚಿತ್ತ ಹರಿಸಿ ಮಳೆಯ ನಿರೀಕ್ಷೆಯಲ್ಲಿ ಕಾದು ಕುಳಿತಿದ್ದು, ಮಳೆರಾಯ ಮುಂದಿನ ದಿನಗಳಲ್ಲಿ ಏನು ಮಾಡುತ್ತಾನೆ ಎಂಬುದನ್ನು ಕಾದು ನೋಡಬೇಕಾಗಿದೆ.